೧೨ ನಿಮಗೆ ನಂಬಿಕೆಯುಳ್ಳ ಸಹೋದರನೆಂದು ನಾನು ನೆನಸಿ ಕೊಳ್ಳುವ [1]ಸಿಲ್ವಾನನ ಸಂಗಡ ಸ್ವಲ್ಪವಾಗಿ
ಬರೆದು, ನೀವು ನಿಂತಿರುವ ದೇವರ ಸತ್ಯವಾದ ಕೃಪೆಯು ಇದೇ ಎಂದು ನಿಮಗೆ ಬುದ್ಧಿ ಹೇಳಿ, ಸಾಕ್ಷಿ
ಕೊಟ್ಟದ್ದೇನೆ.
೧೩ ಬಾಬೆಲಿನಲ್ಲಿ [2]ನಿಮ್ಮ ಕೂಡ ಆಯಲ್ಪಟ್ಟ ಸಭೆಯೂ, ನನ್ನ ಮಗನಾದ [3]ಮಾರ್ಕನೂ, ನಿಮ್ಮನ್ನು ವಂದಿಸು
೧೪ ತ್ತಾರೆ. [4]ಪರಿಶುದ್ಧ ಮುದ್ದಿನಿಂದ ಒಬ್ಬರನ್ನೊಬ್ಬರು ವಂದಿಸಿರಿ.
ಕ್ರಿಸ್ತ ಯೇಸುವಿನಲ್ಲಿರುವ ನಿಮ್ಮೆಲ್ಲರಿಗೆ ಸಮಾಧಾನವು ಆಗಲಿ. ಆಮೆನ್.

1. ಸಿಲ್ವಾನನು ಪೌಲನ ಸಂಗಡ ಪ್ರಯಾಣ ಮಾಡಿದ ಸೀಲನೆಂದು ತೋರುತ್ತದೆ. (ಅಪೊ. ಕ್ರಿ. ೧೫. ೨೨. ೨ ಕೊರಿ. ೧. ೧೯.) ಇವನ ಯಥಾರ್ಥತ್ವವನ್ನು ಕುರಿತು ಪೇತ್ರನಿಗೆ ಏನೂ ಸಂದೇಹವಿಲ್ಲ. ಆದದರಿಂದ ಮೂಲ ಭಾಷೆಯ ತಾತ್ಪರ್ಯದ ಪ್ರಕಾರ, ನಂಬಿಕೆಯುಳ್ಳ ಸಹೋದರನೆಂದು ನೆನಸಿ ಕೊಳ್ಳುತ್ತೇನೆ ಎಂದು ಬರೆದದೆ.

2. ಬಾಬೆಲಿನಲ್ಲಿ ನಿಮ್ಮ ಕೂಡ ಆಯಲ್ಪಟ್ಟ ಸಭೆ ಎಂಬುವದಕ್ಕೆ ಮೂಲ ಭಾಷೆಯಲ್ಲಿ ಬಾಬೆಲಿನಲ್ಲಿ ಕೂಡ ಆಯಲ್ಪಟ್ಟವಳು ಎಂಬದಾಗಿ ಉಂಟು. ಇದು ಬಾಬೆಲಿನಲ್ಲಿರುವ ಸಭೆಯನ್ನು ಕುರಿತದ್ದು. (ಈ ಪತ್ರಿಕೆಯ ಪೀಠಿಕೆಯಲ್ಲಿ ನೋಡ ಬೇಕು.)

3. ಇದು ಮಾರ್ಕನ ಸುವಾರ್ತೆ ಎಂಬ ಗ್ರಂಥವನ್ನು ಬರೆದ ಮಾರ್ಕನೆಂಬ ಯೋಹಾನನೆಂದು ತೋರುತ್ತದೆ. (ಅಪೊ. ಕ್ರಿ. ೧೨. ೧೨; ೧೫. ೩೭. ಕೊಲೊ. ೪. ೧೦.)

4. ರೋಮಾ. ೧೬. ೧೬. ವಚನದ ವ್ಯಾಖ್ಯಾನ ನೋಡ ಬೇಕು.

# THE SECOND EPISTLE GENERAL OF PETER.

## ಪೇತ್ರನ ಹುದುವಾದ ಎರಡನೇ ಪತ್ರಿಕೆಯ ಪೀಠಿಕೆ.

ಅಪೊಸ್ತಲನಾದ ಪೇತ್ರನು ಬರೆದ ಮೊದಲನೇ ಪತ್ರಿಕೆಯ ಹಾಗೆಯೇ, ಈ ಎರಡನೇ ಪತ್ರಿಕೆಯು ಸಹ ಅದೇ ಜನರಿಗೆ ಅಥವಾ ಅದೇ ಸಭೆಯವರಿಗೆ ಬರೆಯಲ್ಪಟ್ಟಿತೆಂಬುವದು ಇದರಲ್ಲಿ ಪ್ರತ್ಯಕ್ಷವಾಗಿದೆ. (೩. ೧.) ಪೇತ್ರನು ರಕ್ತಸಾಕ್ಷಿಯಾಗಿ ಸಾಯುವದಕ್ಕಿಂತ ಸ್ವಲ್ಪ ಮುಂಚೆ ಈ ಪತ್ರಿಕೆ ಬರಿಯಲ್ಪಟ್ಟಿತೆಂದು ತೋರುತ್ತದೆ. (೧. ೧೪.) ಈ ಅಪೊಸ್ತಲನು ಮೊದಲನೇ ಪತ್ರಿಕೆಯನ್ನು ೬೪ನೇ ವರುಷದಲ್ಲಿ ಬರೆದಿದ್ದರೆ, ಎರಡನೇ ಪತ್ರಿಕೆಯನ್ನು ಪೌಲನು ರಕ್ತಸಾಕ್ಷಿಯಾಗಿ ಸತ್ತ ವರುಷವಾದ ೬೬ನೇ ವರುಷದಲ್ಲಿ ಬರೆದಿರುವನೆಂದು ಹೇಳ ತಕ್ಕದ್ದು. ಇದು ಬರಿಯಲ್ಪಟ್ಟ ಸ್ಥಳವನ್ನು ಗೊತ್ತಾಗಿ ಹೇಳುವದಕ್ಕಾಗದು.

ದೇವಭಕ್ತರು ವಿಶ್ವಾಸದಲ್ಲಿ ಸ್ಥಿರ ಪಡಲೂ, ಸಭೆಗೆ ಹೊರಗಿನ ಶತ್ರುಗಳಿಂದ ಬರುವ ಉಪದ್ರಗಳನ್ನು ತಾಳ್ಮೆಯಿಂದ ಸಹಿಸಲೂ ತಕ್ಕಂಥ ತಾತ್ಪರ್ಯದಿಂದ ಪೇತ್ರನು ಮೊದಲನೇ ಪತ್ರಿಕೆಯನ್ನು ಬರೆದನು. ಸಭೆಯಲ್ಲಿರುವ ಕಳ್ಳಬೋಧಕರು, ಭಕ್ತಿಹೀನರು, ಪರಿಹಾಸಕರು ಮುಂತಾದ ದುರ್ಮಾರ್ಗರ ದುರ್ಬೋಧನೆಗಳಿಗೆ ತೊಲಗ ಬೇಕೆಂಬ ತಾತ್ಪರ್ಯದಿಂದ ಅವನು ಈ ಎರಡನೇ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಕರ್ತನ ಪ್ರತ್ಯಕ್ಷತೆಯನ್ನು ಎದುರು ನೋಡುವವರಾಗಿ, ಪರಿಶುದ್ಧತ್ವದಲ್ಲಿಯೂ ಸಕಲ ಸದ್ಗುಣಗಳಲ್ಲಿಯೂ ಹೆಚ್ಚೆಚ್ಚಾಗಿ ಬೆಳಿಯ ಬೇಕೆಂದು ಇದರಲ್ಲಿ ದಿಟ್ಟವಾಗಿ ಹೇಳಿ ಇದೆ.

# THE SECOND EPISTLE GENERAL OF PETER.

## ಅಪೊಸ್ತಲನಾದ

# ಪೇತ್ರನ ಹುದುವಾದ ಎರಡನೇ ಪತ್ರಿಕೆ.

ಭಕ್ತಿ ಅಭಿವೃದ್ಧಿಯಾಗುವದಕ್ಕೆ ತಕ್ಕ ಕಟ್ಟಳೆಗಳು; ಅಪೊಸ್ತಲರು ಸಾರಿದ ದಿವ್ಯ ಸತ್ಯದ ನಿಶ್ಚಯವು.

1. [1]ಯೇಸು ಕ್ರಿಸ್ತನ ದಾಸನೂ, ಅಪೊಸ್ತಲನೂ ಆಗಿರುವ [2]ಸಿಮೆಯೋನ್ ಪೇತ್ರನು, ನಮ್ಮ ದೇವರೂ
ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನೀತಿಯಿಂದ ನಮ್ಮ ಕೂಡ ಸಮ ಬೆಲೆಯುಳ್ಳ ವಿಶ್ವಾಸವನ್ನು [3]ಹೊಂ
೨ ದಿದವರಿಗೆ— ದೇವರೂ, ನಮ್ಮ ಕರ್ತನಾದ ಯೇಸೂ, ಇವರ [4]ತಿಳುವಿಕೆಯಿಂದ ಕೃಪೆಯೂ ಸಮಾಧಾ
ನವೂ ನಿಮಗೆ ಹೆಚ್ಚಲಿ.

೩ ಮಹಿಮೆ [5]ಸದ್ಗುಣಗಳಿಂದ ನಮ್ಮನ್ನು ಕರೆದವನ ತಿಳುವಿಕೆಯ ಮೂಲಕವಾಗಿ [6]ಜೀವಕ್ಕೂ ಭಕ್ತಿಗೂ
ಸಮ್ಮಂಧವಾದವುಗಳನ್ನೆಲ್ಲಾ ಆವನ [7]ದಿವ್ಯ ಬಲವು, ನಮಗೆ ಕೊಟ್ಟ ಪ್ರಕಾರ ಆ ಮಹಿಮೆ ಸದ್ಗುಣಗಳಿಂದ
೪ ಬಹು ದೊಡ್ಡವುಗಳಾದ ಅಮೂಲ್ಯವಾದ ವಾಗ್ದತ್ತಗಳೂ, [8]ಇವುಗಳ ಮುಖಾಂತರ, ನೀವು ಆಶೆಯಿಂದ ಲೋ
ಕದಲ್ಲಿರುವ ನಷ್ಟವನ್ನು ತಪ್ಪಿಸಿ ಕೊಂಡವರಾಗಿ, ದಿವ್ಯ ಸ್ವಭಾವದಲ್ಲಿ ಪಾಲುಗಾರರಾಗುವ ಹಾಗೆ, ನಮಗೆ

1. ಗ್ರಂಥಕರ್ತನಾದ ಪೇತ್ರನು ಆಶೀರ್ವಚನ ಹೇಳಿದ ತರುವಾಯ, (೧, ೨. ವ.) ಮೋಕ್ಷಾನಂದವನ್ನು ಪೂರ್ಣವಾಗಿ ಹೊಂದುವದಕ್ಕೆ ಅವಶ್ಯವಾಗಿರುವ ಸದ್ಗುಣಗಳನ್ನು ಅಭಿವೃದ್ಧಿ ಮಾಡುವ ಉದ್ದಿಶ್ಯ ದೇವರು ಅನುಗ್ರಹಿಸಿದ ಮಹಾ ಕೃಪೆಯನ್ನು ಸೂಚಿಸಿ, (೩—೧೧. ವ.) ತನಗೆ ಮರಣ ಸಮೀಪವಾಗಿರುವದನ್ನು ಗ್ರಹಿಸಿದವನಾಗಿ, ಭೂಮಿಯಲ್ಲಿ ಅವತಾರವೆತ್ತಿದ ಕ್ರಿಸ್ತನ ಮಹಿಮೆಯ ಪ್ರಸನ್ನತೆಯಿಂದಲೂ, ಪೂರ್ವಪ್ರವಾದನೆಗಳಿಂದಲೂ ಸ್ಥಾಪಿಸಲ್ಪಟ್ಟಿರುವ ಮುಖ್ಯವಾದ ದಿವ್ಯ ಸತ್ಯಗಳನ್ನು, ತನ್ನ ಸಹೋದರರಾದ ಭಕ್ತರ ಮನಸ್ಸಿನಲ್ಲಿ ಬೇರೂರ ತಕ್ಕ ವಿಧವಾಗಿ ಹೇಳುತ್ತಾನೆ. (೧೨—೨೧. ವ.)

2. ಇಬ್ರೀಯ ಹೆಸರಾದ ಸಿಮೆಯೋನ್ ಎಂಬುವದೂ, ಸೀಮೋನನೆಂಬುವದೂ ಒಂದೇ.

3. ವಿಶ್ವಾಸವೆಂಬುವದು ದಯಾನಿಧಿಯಾದ ದೇವರ ವರವಾಗಿರುವದರಿಂದ ಅದನ್ನು ಆತನ ಬಳಿಯಲ್ಲಿ ಹೊಂದ ಬೇಕು. (ಎಫೆ. ೨. ೮.) ಪರಮ ಪದವಿಯನ್ನು ಹೊಂದುವದಕ್ಕೆ ಮುಖ್ಯ ಉಪಕರಣವಾಗಿರುವ ವಿಶ್ವಾಸವು ಮಹಾ ಅಮೂಲ್ಯವಾದದ್ದೇ.

4. ತಂದೆಯಾದ ದೇವರನ್ನೂ ಕರ್ತನಾದ ಯೇಸು ಕ್ರಿಸ್ತನನ್ನೂ ಅನುಭವಸಿದ್ಧಾಂತವಾಗಿ ತಿಳಿಯುವದರಿಂದಲೇ ಕೃಪೆಯೂ ಸಮಾಧಾನವೂ ಹೆಚ್ಚುವವು. (ಯೋಹಾ. ೧೭. ೩.) ಮತ್ತು ಆ ತಿಳುವಿಕೆ ಅಭಿವೃದ್ಧಿಯಾಗುವ ಪ್ರಕಾರವೇ ದೇವಭಕ್ತಿಯೂ ವೃದ್ಧಿ ಹೊಂದುವದು.

5. ದೇವರ ಮಹಿಮೆಯುಳ್ಳ ಲಕ್ಷಣಗಳು ಮನುಷ್ಯರ ರಕ್ಷಣೆಯಲ್ಲಿ ಪ್ರಕಾಶವಾಗಿ ತೋರುತ್ತವೆ.

6. ನಿಜವಾದ ಆತ್ಮದ ಜೀವಕ್ಕೂ, ಆ ಜೀವವು ಪ್ರಕಟವಾಗುವ ಆರಾಧನೆಯಾದ ದೇವಭಕ್ತಿಗೂ ಬೇಕಾದ ಸಮಸ್ತ ಮೇಲುಗಳನ್ನೂ ಸರ್ವಶಕ್ತನಾದ ದೇವರು ಅನುಗ್ರಹಿಸಿದ್ದಾನೆ.

7. ನಮ್ಮ ಜೀವಕ್ಕೂ ಭಕ್ತಿಗೂ ತಕ್ಕ ಆಶೀರ್ವಾದಗಳೆಲ್ಲಾ ದೇವರ ದಿವ್ಯ ಬಲದಿಂದಲೇ ಹೊರ್ತು, ಮನುಷ್ಯರ ಬಲದಿಂದಲಾದರೂ ನಮ್ಮ ಸ್ವಂತ ಬಲದಿಂದಲಾದರೂ ಬರಲಿಲ್ಲ. ಹೀಗೆ ದಿವ್ಯ ಬಲದಿಂದ ಕೊಡಲ್ಪಟ್ಟ ವರಗಳಿಂದ ನಾವು ಕ್ರಿಸ್ತನ ಅಂಗಗಳಾಗಿ, ಆತನ ಸ್ವಭಾವವನ್ನು ಹೊಂದಿ, ಪ್ರೀತಿಯುಳ್ಳವರಾಗಿಯೂ ಬೆಳಕಿನ ಮಕ್ಕಳಾಗಿಯೂ ನಡಿಯ ಬೇಕು. (ಕೊಲೊ. ೩. ೧೦. ಇಬ್ರೀ. ೧೨. ೧೦. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ದೇವರ ಕೃಪೆಯಿಂದ ಪಾಪದಿಚ್ಛೆಗಳಿಗೂ ಲೋಕದ ಕೇಡಿಗೂ ತಪ್ಪಿಸಿ ಕೊಂಡ ಭಕ್ತರು ಹೀಗೆ ಅವಶ್ಯವಾಗಿ ನಡಿಯುವರು.

8. ಇವುಗಳು ಅಂದರೆ, ಬಹು ದೊಡ್ಡ ಅಮೂಲ್ಯವಾದ ವಾಗ್ದತ್ತಗಳು. ಜೀವದ ಬುಗ್ಗೆಯಾದ ಕ್ರಿಸ್ತನ ವಿಷಯವಾಗಿಯೂ, ಆತನ ಶರಣಾಗತರಿಗೆ ನಿತ್ಯಜೀವವಾದ ಮೋಕ್ಷಾನಂದ ಉಂಟಾಗುವದೆಂಬದರ ವಿಷಯವಾಗಿಯೂ ನಿಶ್ಚಯ ಕೊಡುವ ಈ ವಾಗ್ದತ್ತಗಳು ಮಹಾ ದೊಡ್ಡವುಗಳೂ ಅಮೂಲ್ಯವಾದವುಗಳೂ ಆಗಿವೆ. ಅವು ಭಕ್ತರಲ್ಲಿ ಈಡೇರುತ್ತಾ ಬರುವದರಿಂದ ಅವರು ದಿವ್ಯ ಸ್ವಭಾವದಲ್ಲಿ ತೇರುತ್ತಾ ಬರುತ್ತಾರೆ.



೫ ಕೊಡಲ್ಪಟ್ಟವೆ. [1]ಇದಕ್ಕೋಸ್ಕರ ಎಲ್ಲಾ ಜಾಗ್ರತೆಯನ್ನು ಮಾಡಿ ಕೊಂಡು, ನಿಮ್ಮ ವಿಶ್ವಾಸಕ್ಕೆ ಸದ್ಗುಣ
೬ ವನ್ನೂ, ಸದ್ಗುಣಕ್ಕೆ ತಿಳುವಿಕೆಯನ್ನೂ, ತಿಳುವಿಕೆಗೆ ಮಿತಾನುಭವವನ್ನೂ, ಮಿತಾನುಭವಕ್ಕೆ ತಾಳ್ಮೆಯ
೭ ನ್ನೂ, ತಾಳ್ಮೆಗೆ ಭಕ್ತಿಯನ್ನೂ, ಭಕ್ತಿಗೆ ಸಹೋದರಸ್ನೇಹವನ್ನೂ, ಸಹೋದರಸ್ನೇಹಕ್ಕೆ [2]ಪ್ರೀತಿಯನ್ನೂ,
ಕೂಡಿಸಿರಿ.

೮ ಯಾಕಂದರೆ ಇವುಗಳು ನಿಮಗೆ ಉಂಟಾಗಿ, ಹೆಚ್ಚಿದರೆ, ಅವು ನಿಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನ
೯ ತಿಳುವಿಕೆಯಲ್ಲಿ [3]ಮೈಗಳ್ಳರೂ ನಿಷ್ಪ್ರಯೋಜಕರೂ ಅಲ್ಲದ ಹಾಗೆ ಮಾಡುವವು. ಯಾಕಂದರೆ ಇವುಗಳಿಲ್ಲದ
ವನು [4]ಕುರುಡನೂ, ಮೊಬ್ಬುಗಣ್ಣನೂ, ತನ್ನ ಮುಂಚಿನ ಪಾಪಗಳ ಶುದ್ಧೀಕರಣವನ್ನು ಮರೆತವನೂ, ಆಗಿ
೧೦ ದ್ದಾನೆ. ಆದದರಿಂದ, ಸಹೋದರರೇ, ನಿಮ್ಮ [5]ಕರೆಯುವಿಕೆಯನ್ನೂ ಆಯುವಿಕೆಯನ್ನೂ ಸ್ಥಿರ ಮಾಡುವ
ಹಾಗೆ, ಹೆಚ್ಚಾಗಿ ಜಾಗ್ರತೆಯಾಗಿರ್ರಿ. ಯಾಕಂದರೆ ಇವುಗಳನ್ನು ಮಾಡಿದರೆ, ಎಂದಿಗೂ ಎಡವದೆ ಇರುವಿರಿ.
೧೧ ಯಾಕಂದರೆ ಹೀಗೆಯೇ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ನಿಮಗೆ
ಪ್ರವೇಶವು [6]ಐಶ್ವರ್ಯವಾಗಿ ಕೊಡಲ್ಪಡುವದು.

೧೨ ಆದದರಿಂದ ನೀವು ತಿಳಿದವರಾಗಿ, ಈಗಿನ [7]ಸತ್ಯದಲ್ಲಿ ಸ್ಥಿರವಾಗಿದ್ದರೂ, ಇವುಗಳನ್ನು ಯಾವಾಗಲೂ
೧೩ ನಿಮಗೆ ಜ್ಞಾಪಕ ಮಾಡುವದರಲ್ಲಿ ಅಜಾಗ್ರತೆಯಾಗಿರೆನು. ಆದರೆ ನಾನು, ಈ ಗುಡಾರದಲ್ಲಿರುವ ಮಟ್ಟಿಗೂ,
೧೪ ನಿಮಗೆ ಜ್ಞಾಪಕ ಮಾಡಿ ಎಚ್ಚರಿಸುವದು ತಕ್ಕದ್ದೆಂದು, ಎಣಿಸುತ್ತೇನೆ. ಹ್ಯಾಗಂದರೆ, ನಮ್ಮ ಕರ್ತನಾದ
ಯೇಸು ಕ್ರಿಸ್ತನು [8]ನನಗೆ ತೋರಿಸಿದ ಪ್ರಕಾರ, ನನ್ನ [9]ಗುಡಾರವನ್ನು ತೆಗೆದು ಹಾಕುವ ಕಾಲವು ಬೇಗ

1. ಸರ್ವಶಕ್ತನಾದ ದೇವರು ವಾಗ್ದತ್ತ ಮಾಡಿರುವ ಸಹಾಯವನ್ನೂ ಬಲವನ್ನೂ ಹೊಂದಿದವರು ಸಕಲ ಸದ್ಗುಣಗಳಲ್ಲಿಯೂ ಅಭಿವೃದ್ಧಿ ಹೊಂದುವದಕ್ಕೆ ಎಲ್ಲಾ ಜಾಗ್ರತೆಯಿಂದ ನಡೆದು ಕೊಳ್ಳುವರು. ದೇವರ ಕೃಪೆಯಿಂದ ಆತ್ಮದ ಮೇಲುಗಳನ್ನು ಹೊಂದಿದವರು ಸೋಮಾರಿತನವಿಲ್ಲದೆ ಬಹಳ ಸಾಧನೆಯೂ ಜಾಗ್ರತೆಯೂ ಉಳ್ಳವರಾಗಿ ಇರುವರು.

2. ಮೇಲೆ ಹೇಳಿದ ಎಂಟು ಸದ್ಗುಣಗಳನ್ನು ಹೊಂದಿರುವ ಕ್ರೈಸ್ತನು ಪರಮ ವಶೀಕರಣವುಳ್ಳವನಾಗಿ ಪ್ರಕಾಶಿಸುವನು. ಈ ಸದ್ಗುಣಗಳೆಲ್ಲಾ ಪರಿಶುದ್ಧಾತ್ಮನ ಕೃಪೆಯಿಂದಲೇ ಉಂಟಾಗುತ್ತವೆ. (ಗಲಾ. ೫. ೨೨, ೨೩.)

3. ಮೇಲೆ ಹೇಳಿದ ಸದ್ಗುಣಗಳನ್ನು ಭೂಷಣವಾಗಿ ಧರಿಸಿ ಕೊಂಡಿರುವ ಕ್ರಿಸ್ತನ ದಾಸರು, ತಮ್ಮ ನಾಯಕನಾದ ಕ್ರಿಸ್ತನ ವಿಷಯವಾದ ತಿಳುವಳಿಕೆಯಲ್ಲಿ ಹೆಚ್ಚೆಚ್ಚಾಗಿ ಬೆಳಿಯುತ್ತಾ ಬರುವರೇ ಹೊರ್ತು, ಮೈಗಳ್ಳರಾಗಿಯೂ ನಿಷ್ಪ್ರಯೋಜಕರಾಗಿಯೂ ಇರಲಾರರು.

4. ಮೇಲೆ ಹೇಳಿದ ಸದ್ಗುಣಗಳಿಲ್ಲದ ನಿಸ್ಸಾರವಾದ ಕ್ರೈಸ್ತನು ತಾನು ಸ್ನಾನದಲ್ಲಿ ಅರಿಕೆ ಮಾಡಿದ ವಿಶ್ವಾಸದ ಮೂಲಕವಾಗಿ ಹೊಂದಿದ ಪಾಪಗಳ ಶುದ್ಧೀಕರಣವನ್ನು, ಅಥವಾ ಪಾಪಕ್ಷಮೆಯ ವಾಗ್ದತ್ತವನ್ನು ಬೇಕಾಗಿ ಮರೆತು, ಪ್ರಪಂಚದ ಮರುಳಿನಿಂದಲೂ, ಪಾಶಗಳಿಂದಲೂ, ಕಣ್ಣು ಇಂಗಿ ಹೋದ ಕುರುಡನಾಗಿದ್ದಾನೆ; ಕ್ರಿಸ್ತನ ವಿಷಯವಾದ ಸತ್ಯದ ಬೆಳಕನ್ನು ಕಾಣಲಾರದ ಮೊಬ್ಬುಗಣ್ಣನಾಗಿದ್ದಾನೆ.

5. ಸರ್ವಜ್ಞನೂ ಕೃಪಾನಿಧಿಯೂ ಆದ ದೇವರಿಂದ ಆಯಲ್ಪಟ್ಟು, ಆತನ ಆತ್ಮನಿಂದ ಕರೆಯಲ್ಪಟ್ಟವರಿಗೆ ಬಹಿರಂಗದ ಉತ್ತಮ ನಡತೆಯೂ ಪರಿಶುದ್ಧ ಗುಣಶೀಲಗಳೂ ತಕ್ಕ ಸಾಕ್ಷಿಯಾಗಿವೆ. ತಮ್ಮ ಕರೆಯುವಿಕೆಯನ್ನು ಸ್ಥಿರ ಪಡಿಸ ತಕ್ಕ ವಿಧವಾಗಿ ನಡಿಯುವವರೇ ಆಯುವಿಕೆಯನ್ನು ಸ್ಥಿರ ಪಡಿಸುವವರಾಗಿಯೂ, ಅದೃಶ್ಯವಾದ ಆಯುವಿಕೆಯನ್ನು ದೃಶ್ಯವಾದ ಕರೆಯುವಿಕೆಯಿಂದ ದೃಢ ಪಡಿಸುವವರಾಗಿಯೂ ಇರ ಬೇಕು. ಹಡಗಯಾತ್ರೆ ಮಾಡುವ ನಾವಿಕನು ತನ್ನ ಕಣ್ಣಿಗೆ ಕಾಣಿಸದ ಉತ್ತರ ದಿಕ್ಕಿನಲ್ಲಿರುವ ಧೃವನಕ್ಷತ್ರದ ದಿಶೆಯು ದಿಕ್ಯಂತ್ರದಿಂದ ತಿಳಿದು ಕೊಳ್ಳುವ ಪ್ರಕಾರ, ಮೋಕ್ಷಮನೆಯನ್ನು ಗುರಿ ಇಟ್ಟು ನಡಿಯುವ ಭಕ್ತನ ಪರಿಶುದ್ಧ ನಡತೆಯಿಂದ, ದೇವರ ಆಯುವಿಕೆಯು ಪರಿಷ್ಕಾರವಾಗಿ ತೋರುವದು. ಇವುಗಳನ್ನು ಮಾಡಿ ಜಾಗ್ರತೆಯಾಗಿ ನಡಿಯುವ ಭಕ್ತನು ಬೀಳದಂತೆ, ದೇವರು ಅವನನ್ನು ತನ್ನ ಕೈಯಲ್ಲಿ ಎತ್ತಿ ಕೊಳ್ಳುವನು.

6. ಸದ್ಗುಣಗಳನ್ನು ಒಂದಕ್ಕೊಂದು ಕೂಡಿಸಿ ನಡಿಯುವ ಭಕ್ತರಿಗೆ, ಸತ್ಯಪರನಾದ ದೇವರು ಕ್ರಿಸ್ತನ ನಿತ್ಯರಾಜ್ಯದಲ್ಲಿ ಸಕಲ ಮಹಿಮೆಯನ್ನು ಸಂಪೂರ್ಣವಾಗಿ ಕೂಡಿಸಿ ಕೊಡುವನು. ಕ್ರಿಸ್ತನ ರಾಜ್ಯದಲ್ಲಿ ಪ್ರವೇಶವು ಐಶ್ವರ್ಯವಾಗಿ ಕೊಡಲ್ಪಡುವದು ಎಂಬುವದು ಪರದಲ್ಲಿ ಹೊಂದುವ ಮಹಿಮೆಯ ಸಂಪೂರ್ಣತೆಯನ್ನು ತೋರಿಸುತ್ತದೆ.

7. ಸುವಾರ್ತೆಯ ಮೂಲಕವಾಗಿ ಈ ವರಿಗೆ ಅವರು ಅರಿತಿದ್ದ ಸತ್ಯವನ್ನು ಕುರಿತದ್ದು. (ಕೊಲೊ. ೧. ೬.) ಈ ಸತ್ಯವು ದೇವಭಕ್ತಿಯ ವೃದ್ಧಿಗೆ ಹೇತುವೆಯಾದ ಉಪದೇಶವೇ. ಅದನ್ನು ಅವರಿಗೆ ಜ್ಞಾಪಕ ಪಡಿಸುವದರಲ್ಲಿ ಪೇತ್ರನು ಅಜಾಗ್ರತೆಯಾಗಿರಲಿಲ್ಲ.

8. ಯೇಸು ಕ್ರಿಸ್ತನು ಪರಲೋಕಕ್ಕೆ ಏರಿ ಹೋಗುವದಕ್ಕಿಂತ ಸ್ವಲ್ಪ ಮುಂಚೆ, ಪೇತ್ರನು ಮರಣ ಹೊಂದುವ ವಿಧವನ್ನು ಕುರಿತು ಪ್ರವಾದನೆಯಾಗಿ ಹೇಳಿದನು. (ಯೋಹಾ. ೨೧. ೧೮, ೧೯.)

9. ಗುಡಾರ ಅಂದರೆ, ಗುಡಾರದ ಹಾಗೆ ನೆಲೆ ಇಲ್ಲದ ಶರೀರವು. (೨ ಕೊರಿ. ೫. ೧.) ಇದರಲ್ಲಿ ಶರೀರವು ನೆಲೆ ಇಲ್ಲದ ಗುಡಾರಕ್ಕೂ ಕಳೆದು ಬಿಡುವ ವಸ್ತ್ರಕ್ಕೂ ಉಪಮಾನವಾಗಿ ಹೇಳಿ ಇದೆ. ತನಗೆ ಮರಣವು ಶೀಘ್ರವಾಗಿ ಬರುವದೆಂದು ಅರಿತಿದ್ದ ಪೇತ್ರನು, ತಾನು ಪ್ರಸಂಗಿಸಿದ ದಿವ್ಯ ಸತ್ಯಗಳನ್ನು ಕ್ರೈಸ್ತರು

ಬರುತ್ತದೆಂದು ಬಲ್ಲೆನು. ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಹ ಅದನ್ನು ನನಗೆ ತೋರಿಸಿದ್ದಾನೆ.
೧೫ ಇದಲ್ಲದೆ ನಾನು ಹೋದ ಮೇಲೆ ನೀವು ಇವುಗಳನ್ನು ಯಾವಾಗಲೂ ನೆನಸುವ ಹಾಗೆ, ಜಾಗ್ರತೆಯಾಗಿ
ರುವೆನು.
೧೬ ಯಾಕಂದರೆ ಯುಕ್ತಿಯುಳ್ಳ ಕಟ್ಟುಕಥೆಗಳನ್ನು ಅನುಸರಿಸುವವರಾಗದೆ, ಅವನ ಮಹತ್ತಿಗೆ ಕಣ್ಣುಸಾಕ್ಷಿ
ಗಳಾಗಿದ್ದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಬಲವನ್ನೂ [1]ಬರುವಿಕೆಯನ್ನೂ ನಿಮಗೆ ತಿಳಿಸಿದೆವು.
೧೭ ಯಾಕಂದರೆ—ಇವನೇ ನನ್ನ ಪ್ರಿಯ ಮಗನು; ಇವನಲ್ಲಿ ನಾನು ಆನಂದ ಪಡುತ್ತೇನೆ, (ಮತ್ತಾ. ೧೭. ೫.)
ಎಂಬುವ ಶಬ್ದವು ಬಹು ಘನವಾದ ಮಹಿಮೆಯಿಂದ ಅವನಿಗೆ ಬಂದಾಗ, ತಂದೆಯಾದ ದೇವರಿಂದ ಮಾನ
೧೮ ವನ್ನೂ ಮಹಿಮೆಯನ್ನೂ ಹೊಂದಿದನು. ಆಕಾಶದಿಂದ ಬಂದ ಆ ಶಬ್ದವನ್ನು ನಾವು [2]ಪರಿಶುದ್ಧ ಪರ್ವತ
ದಲ್ಲಿ ಅವನ ಸಂಗಡ ಇದ್ದಾಗ, ಕೇಳಿದೆವು.
೧೯ ಮತ್ತು [3]ಹೆಚ್ಚಾಗಿ ಸ್ಥಿರವಾದ ಪ್ರವಾದನೆಯ ವಾಕ್ಯವು ನಮಗೆ ಉಂಟು; ದಿವಸವು ಬೆಳಗುವ ಪರ್ಯಂತ
ರಕ್ಕೂ, ಉದಯನಕ್ಷತ್ರವು ನಿಮ್ಮ ಹೃದಯಗಳಲ್ಲಿ ಮೂಡುವ ಪರ್ಯಂತರಕ್ಕೂ, ಇದನ್ನು ಕತ್ತಲೆಯಾದ
೨೦ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಲಕ್ಷ್ಯ ಮಾಡಿದರೆ, ಚನ್ನಾಗಿ ಮಾಡುತ್ತೀರಿ. ಯಾಕಂದರೆ ಬರಹ
ದಲ್ಲಿರುವ ಯಾವ ಪ್ರವಾದನೆಯಾದರೂ [4]ಸ್ವಂತ ವ್ಯಾಖ್ಯಾನಕ್ಕೆ ಬರುವದಿಲ್ಲವೆಂದು, [5]ಮೊದಲು ತಿಳಿದಿದ್ದೀರಿ.
೨೧ ಯಾಕಂದರೆ ಪ್ರವಾದನೆಯು ಎಂದೂ ಮನುಷ್ಯನ ಇಚ್ಛೆಯಿಂದ ಆಗಲಿಲ್ಲ. ಆದರೆ ದೇವರ ಪರಿಶುದ್ಧ ಮನು
ಷ್ಯರು, [6]ಪರಿಶುದ್ಧಾತ್ಮದಿಂದ ಪ್ರೇರೇಪಿಸಲ್ಪಟ್ಟು, ಮಾತಾಡಿದರು.

ತನ್ನ ಮರಣದ ತರುವಾಯ ಮರೆಯದೆ, ಅವುಗಳನ್ನು ಅನುಸರಿಸಿ ನಡಿಯುವ ಹಾಗೆ, ಬಹಳ ಚಿಂತೆಯುಳ್ಳವನಾಗಿದ್ದನು. ದೇವರ ದಾಸರು ಕಡೇ ದಿವಸಗಳಲ್ಲಿ ಹೇಳಿದ ಬುದ್ಧಿಗಳೂ ಎಚ್ಚರಿಕೆಗಳೂ ಕೇಳಿದವರ ಮನಸ್ಸಿನಲ್ಲಿ ಬಹಳ ಪ್ರೇರೇಪಣೆ ಹುಟ್ಟಿಸುವವು.

1. ಕ್ರಿಸ್ತನ ಕಡೇ ಬರುವಿಕೆಯು ಆತನ ಪರಿಶುದ್ಧರಲ್ಲಿ ಮಹಿಮೆ ಪಡುವದು (೨ಥೆಸ್ಸ. ೧. ೧೦.) ಎಂಬುವದು ತಿರು ಸಭೆಯ ನಂಬಿಕೆಯಾಗಿದೆ. ಇದನ್ನು ದೇವರ ದಾಸರಾದ ಪೇತ್ರನು ಮುಂತಾದ ಅಪೊಸ್ತಲರು ಯುಕ್ತಿಯುಳ್ಳ ಕಟ್ಟುಕಥೆಗಳನ್ನನುಸರಿಸುವ ವಂಚಕರಾಗಿರದೆ, ಪರಂಜ್ಯೋತಿಯಾದ ಕ್ರಿಸ್ತನ ಸಮಾನವಿಲ್ಲದ ಮಹಿಮೆಯನ್ನು ಪರಿಶುದ್ಧ ಪರ್ವತದಲ್ಲಿ ಕಣ್ಣಿನಿಂದ ಕಂಡ ಪ್ರಕಾರ ಯಥಾರ್ಥವಾಗಿ ಎಲ್ಲರಿಗೂ ತಿಳಿಸಿದರು. (ಲೂಕ. ೯. ೨೮—೩೬. ವಚನಗಳ ವ್ಯಾಖ್ಯಾನ ನೋಡ ಬೇಕು.)

2. ಪರಿಶುದ್ಧ ದೇವರ ಮಹಿಮೆ ಪ್ರಕಟವಾದ ಪರ್ವತವು ಪರಿಶುದ್ಧವಾದದ್ದೇ. (ಉತ್ಪ. ೨೮. ೧೭. ಹೊರ. ೩. ೫. ಯೆಹೋಶು. ೫. ೧೫.)

3. ಪರಿಶುದ್ಧ ಪರ್ವತದಲ್ಲಿ ಕರ್ತನು ಮಹಿಮೆಯಾಗಿ ಪ್ರಸನ್ನನಾದ ದರ್ಶನವು ಒಂದು ದೃಷ್ಟಾಂತವಾಗಿದೆ. ಅದೇ ಪ್ರಕಾರ ಪೂರ್ವ ಪ್ರವಾದನೆಗಳು ಅದಕ್ಕಿಂತ ಅಧಿಕ ಸ್ಥಿರವಾದ ದೃಷ್ಟಾಂತವಾಗಿವೆ. ಎಲ್ಲಾ ಪ್ರವಾದನೆಗಳು, ಕರ್ತನು ಪೂರ್ಣ ಮಹಿಮೆಯುಳ್ಳವನಾಗಿ ಎರಡನೇ ಸಾರಿ ಪ್ರಸನ್ನನಾಗುವನೆಂಬುವದನ್ನು ನಿಶ್ಚಯ ಪಡಿಸುತ್ತವೆ. ಆ ಮಹಿಮೆಯ ದಿವಸವು ಬರುವ ಪರ್ಯಂತರ ಈ ಪ್ರವಾದನೆಗಳ ವಾಕ್ಯಗಳನ್ನು ನಮ್ಮ ಹಾದಿಗೆ ಬೆಳಕಾಗಿಯೂ, ನಮ್ಮ ಮನಸ್ಸಿಗೆ ಸಂತೋಷವಾಗಿಯೂ ಎಣಿಸಿ ನಡಿಯ ತಕ್ಕದ್ದು. ಪ್ರವಾದನೇ ವಾಕ್ಯವನ್ನು ಓದಿ ಧ್ಯಾನಿಸಿದರೆ, ಆ ಮಹಿಮೆಯುಳ್ಳ ದಿನದ ಉದಯದ ನಕ್ಷತ್ರವು ಭಕ್ತರ ಹೃದಯಗಳಲ್ಲಿ ಮೂಡುವದು.

4. ಮನುಷ್ಯನು ಪ್ರವಾದನೆಯ ವಾಕ್ಯವನ್ನು ಸ್ವಂತ ಆಲೋಚನೆಯ ಪ್ರಕಾರ ವ್ಯಾಖ್ಯಾನ ಕಲ್ಪಿಸ ಕೂಡದು. ವಿದ್ವಾಂಸರು ಇದಕ್ಕೆ ನಾನಾ ಪ್ರಕಾರ ಅರ್ಥ ಹೇಳುವರು. ಹ್ಯಾಗಂದರೆ, ಒಂದು ಪ್ರವಾದನೆಯ ವಾಕ್ಯವನ್ನು ಬೇರೆ ಪ್ರವಾದನೆಯ ವಾಕ್ಯಗಳ ಅನುಸರಣೆ ಇಲ್ಲದೆ, ಅಥವಾ ಲೋಕಚರಿತ್ರೆಯ ಸಹಾಯವಿಲ್ಲದೆ, ವಿವರಿಸಿ ಹೇಳುವದು ಅಸಾಧ್ಯ. ಇದು ಅಲ್ಲದೆ, ಆ ಪ್ರವಾದನೆಯ ವಾಕ್ಯವನ್ನು ಹೇಳಿದ ಪ್ರವಾದಿಗೆ ಸಹ ಅದರ ವಿವರ ತಿಳಿಯದೆ ಇತ್ತು, ಎಂಬದಾಗಿ ಹೇಳುವರು. (ದಾನಿ. ೧೨. ೮.) ಹ್ಯಾಗಾದರೂ ಅದು ಮನುಷ್ಯನ ವಾಕ್ಯವಾಗಿರದೆ, ದೇವರ ವಾಕ್ಯವೆಂದು ಎಲ್ಲರು ಕೈಕೊಳ್ಳ ಬೇಕು; ಮತ್ತು ಅದು ಈಡೇರುವ ಕಾಲವನ್ನು ನಿರೀಕ್ಷಿಸುತ್ತಾ ಇರ ಬೇಕು.

5. ಉಳಿದ ಸತ್ಯಗಳನ್ನೆಲ್ಲಾ ಸರಿಯಾಗಿ ತಿಳಿದು ಕೊಳ್ಳುವದಕ್ಕೆ ಇದನ್ನು ಮೊದಲು ತಿಳಿಯ ತಕ್ಕದ್ದು.

6. ಪ್ರವಾದನೆಯ ವಾಕ್ಯಗಳೆಲ್ಲಾ ಪರಿಶುದ್ಧಾತ್ಮನ ಪ್ರೇರಣೆಯಿಂದಲೇ ಹೇಳಲ್ಪಟ್ಟವುಗಳಾಗಿವೆ. ಮನುಷ್ಯನ ಚಿತ್ತದಿಂದಲೂ ಯುಕ್ತಿಯಿಂದಲೂ ಹೇಳಲ್ಪಟ್ಟವುಗಳಲ್ಲ. ದೇವರ ಪರಿಶುದ್ಧ ಮನುಷ್ಯರು ಅವರವರ ತಿಳುವಳಿಕೆಗೂ ಸ್ವಭಾವಕ್ಕೂ ತಕ್ಕ ಹಾಗೆ ಮಾತಾಡಿದಾಗ್ಯೂ, ಪರಿಶುದ್ಧಾತ್ಮನ ಪ್ರೇರಣೆಯಿಂದ ಹೇಳಲ್ಪಟ್ಟ ಕಾರಣ, ಅವರ ವಾಕ್ಯಗಳೆಲ್ಲಾ ದೇವರ ಸತ್ಯ ವಾಕ್ಯಗಳೇ ಸರಿ. (೨ ತಿಮೊ. ೩. ೧೬, ೧೭.)



ಕಳ್ಳಬೋಧಕರ ಗುಣವನ್ನೂ, ಅವರ ಅಂತ್ಯವನ್ನೂ ಉದಾಹರಿಸಿ, ಅವರಿಗೆ ತೊಲಗುವ ಹಾಗೆ ಎಚ್ಚರಿಸಿದ್ದು.

2. ಆದರೆ [1]ಜನರಲ್ಲಿ [2]ಸುಳ್ಳು ಪ್ರವಾದಿಗಳು ಇದ್ದರು; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು
ಇರುವರು. ಅವರು [3]ನಾಶನಕರವಾದ ಮತಭೇದಗಳನ್ನು ಅಂತರಂಗವಾಗಿ ಒಳತಂದು, ತಮ್ಮನ್ನು ಕೊಂಡು
೨ ಕೊಂಡ ಯಜಮಾನನನ್ನು ಬೊಂಕಿ, ತೀವ್ರ ನಾಶನವನ್ನು ತಮ್ಮ ಮೇಲೆ ಬರ ಮಾಡಿ ಕೊಳ್ಳುವರು. ಅನೇ
ಕರು ಅವರ ಕೇಡುಗಳನ್ನು ಅನುಸರಿಸುವರು; ಇವರ ಮುಖಾಂತರ ಸತ್ಯದ ಮಾರ್ಗವು ದೂಷಿಸಲ್ಪಡುವದು.
೩ ಮತ್ತು ದ್ರವ್ಯಾಶೆಯಾಗಿ ಕಲ್ಪನೆ ಮಾತುಗಳಿಂದ ನಿಮ್ಮನ್ನು [4]ಕ್ರಯ ವಿಕ್ರಯ ಮಾಡುವರು; ಅವರಿಗೆ ನ್ಯಾ
ಯತೀರ್ವಿಕೆಯು ಪೂರ್ವದಿಂದ ತಡೆಯುವದಿಲ್ಲ, ಅವರ [5]ನಾಶನವು ತೂಕಡಿಸುವದಿಲ್ಲ.
೪ ಯಾಕಂದರೆ ದೇವರು [6]ಪಾಪ ಮಾಡಿದ ದೂತರನ್ನು ಕನಿಕರಿಸದೆ, ಕತ್ತಲೆಯ ಸಂಕೋಲೆಗಳಿಂದ [7]ನರಕ
೫ ದಲ್ಲಿ ತಳ್ಳಿ, ನ್ಯಾಯತೀರ್ವಿಕೆಗೆ ಇಡಲ್ಪಟ್ಟವರಾಗಿ ಒಪ್ಪಿಸಿ, ಪೂರ್ವದ ಲೋಕವನ್ನು ಕನಿಕರಿಸದೆ, ಭಕ್ತಿ
ಹೀನರ ಲೋಕಕ್ಕೆ ಜಲಪ್ರಳಯವನ್ನು ಬರ ಮಾಡಿ, ನೀತಿಯ ಪ್ರಸಂಗಿಯಾದ [8]ನೋಹನು ಮೊದಲಾದವರು
೬ ಎಂಟು ಜನರನ್ನು ಕಾಪಾಡಿ, ಮತ್ತು ಸೊದೋಮ್ ಗಮೋರ ಪಟ್ಟಣಗಳನ್ನು ಬೂದಿ ಮಾಡಿ, ನಾಶನದಿಂದ
೭ ನ್ಯಾಯ ತೀರಿಸಿ, ಇನ್ನು ಮೇಲೆ ಭಕ್ತಿಹೀನರಾಗುವವರಿಗೆ ಮಾದರಿ ಇಟ್ಟು, ನೀತಿಭ್ರಷ್ಟರ ಬಂಡುತನದಲ್ಲಿ
೮ ಇರುವ ನಡತೆಯಿಂದ ವ್ಯಸನ ಪಡುವ [9]ನೀತಿವಂತನಾದ ಲೋಟನನ್ನು ತಪ್ಪಿಸಲಿಲ್ಲವೋ? ಯಾಕಂದರೆ

1. ಪೂರ್ವ ಪ್ರವಾದಿಗಳಲ್ಲಿ ಕಳ್ಳಪ್ರವಾದಿಗಳು ಇದ್ದ ಪ್ರಕಾರ, ಸುವಾರ್ತೆ ಪ್ರಸಂಗಿಸಿದವರಲ್ಲಿ ಸತ್ಯವನ್ನು ಮಾರ್ಪಡಿಸಿ, ನಾಶವನ್ನು ಬರ ಮಾಡಿ ಕೊಂಡ ಕಳ್ಳಬೋಧಕರು ಇದ್ದರು. (೨. ೧—೩.) ದೇವರು ಸನ್ಮಾರ್ಗರಿಗೆ ರಕ್ಷಣೆಯನ್ನೂ ದುರ್ಮಾರ್ಗರಿಗೆ ನಾಶನವನ್ನೂ ಕೊಡುವನೆಂಬುವದನ್ನು ಹಳೇ ಒಡಂಬಡಿಕೆಯ ದೃಷ್ಟಾಂತಗಳಿಂದ ರುಜು ಪಡಿಸಿ, (೪—೯. ವ.) ಅಧಿಕಾರಗಳನ್ನು ತಿರಸ್ಕರಿಸಿ, ದುರ್ಮಾರ್ಗತನವನ್ನು ಭಯವಿಲ್ಲದೆ ನಡಿಸಿ, ದ್ರವ್ಯಾಶೆಯುಳ್ಳವರಾಗಿ ನಡಿಯುವ ಭಕ್ತಿಹೀನರಿಗೆ ಬರುವ ದಂಡನೆಯನ್ನು ಹೇಳಿ, (೧೦—೧೬. ವ.) ಬಲಹೀನರನ್ನು ಇಚ್ಛಕದ ಮಾತುಗಳಿಂದ ಮೋಸಗೊಳಿಸಿ, ಅವರನ್ನು ನಾಶಕ್ಕೆ ಹೇತುವೆಯಾಗ ಮಾಡುವ ಪಾತಕರು ಯಾರೆಂಬುವದನ್ನು ತೋರಿಸಿ ಇದೆ. (೧೭—೨೨. ವ.)

2. ೧. ೨೧. ವಚನದಲ್ಲಿ ಹೇಳಲ್ಪಟ್ಟ ಪರಿಶುದ್ಧ ಮನುಷ್ಯರು ಇದ್ದ ಪ್ರಕಾರ, ಇಸ್ರಯೇಲ ಜನರಲ್ಲಿ ಸುಳ್ಳು ಪ್ರವಾದಿಗಳು ಸಹ ಇದ್ದರು.

3. ಕಳ್ಳಬೋಧಕರು ಒಳತಂದ ನಾಶನಕರವಾದ ಮತಭೇದಗಳಲ್ಲಿ ಕ್ರಿಸ್ತನ ದೈವತ್ವವನ್ನೂ ಅಧಿಕಾರವನ್ನೂ ಬೊಂಕುವದೇ ಮುಖ್ಯವಾದದ್ದು. ಹೀಗೆ ಸುಳ್ಳು ಬೋಧಕರು ತಮ್ಮನ್ನು ಕೊಂಡು ಕೊಂಡ ಯಜಮಾನನನ್ನು ಬೊಂಕಿ ತೀವ್ರ ನಾಶನಕ್ಕೊಳಗಾದರು. ಇಂಥಾ ತಪ್ಪಾದ ಅಭಿಪ್ರಾಯವುಳ್ಳವರು ತಪ್ಪಾದ ನಡತೆಯುಳ್ಳವರಾಗಿರುವರೆಂಬುವದು ಈ ವಚನಗಳಲ್ಲಿ ಪ್ರತ್ಯಕ್ಷವಾಗಿ ತೋರುತ್ತದೆ. (೨. ವ.)

4. ಸತ್ಯ ಮಾರ್ಗವನ್ನು ಮತ್ತೊಬ್ಬರು ದೂಷಿಸ ತಕ್ಕ ಪ್ರಕಾರ ನಡೆದು ಕೊಳ್ಳುವ ದ್ರೋಹಿಗಳು ದ್ರವ್ಯವನ್ನೇ ಮುಖ್ಯವಾಗಿ ಅಪೇಕ್ಷಿಸಿ ನಯವಾದ ಮಾತುಗಳಿಂದ ಬಲಹೀನರನ್ನು ಮಾಯದಲ್ಲಿ ತಿಕ್ಕಿಸಿ, ಅವರ ಆತ್ಮಗಳನ್ನು ವಿಕ್ರಯ ಮಾಡುವರು. (೧ ತಿಮೊ. ೬. ೫. ತೀತ. ೧. ೧೧.)

5. ತಮ್ಮನ್ನೂ ಮತ್ತೊಬ್ಬರನ್ನೂ ಕೆಡಿಸಿ ಕೊಳ್ಳುವ ಸುಳ್ಳು ಬೋಧಕರಿಗೆ ಆದಿಯಲ್ಲಿಯೇ ದೇವರಿಂದ ವಿಧಿಸಲ್ಪಟ್ಟ ಆಜ್ಞೆಯೂ ನಾಶವೂ ಸಂಭವಿಸದೆ ಇರಲಾರದು. ಅದು ಬೇಗ ಬಾರದೆ ಇರುವದರಿಂದ ಅವರು ತಮ್ಮ ಹೃದಯಗಳನ್ನು ಕಠಿಣ ಪಡಿಸಿ ಕೊಂಡಾಗ್ಯೂ, (ಪ್ರಸಂಗಿ. ೮. ೧೧.) ಅವರ ಮೇಲೆ ಸಿಡಿಲಿನ ಹಾಗೆ ಬರುವ ನಾಶನವು ತೂಕಡಿಸುವದಿಲ್ಲ. ಭಯಂಕರವಾಗಿ ಅವರನ್ನು ಹಿಡಿಯುವದು.

6. ೪—೯. ವರಿಗೂ ಇರುವ ವಚನಗಳ ಸಮ್ಮಂಧವನ್ನು ಹ್ಯಾಗೆ ತೋರಿಸ ಬಹುದಂದರೆ, ಪಾಪ ಮಾಡಿದ ದೂತರನ್ನು ತಪ್ಪಿಸಿ ಬಿಡದೆ, (೪. ವ.) ಭಕ್ತನಾದ ನೋಹನನ್ನು ರಕ್ಷಿಸಿ, ಭಕ್ತಿಹೀನರಾದ ಎಲ್ಲರನ್ನು ನಾಶ ಮಾಡಿದವನಾಗಿಯೂ, (೫. ವ.) ಅಕ್ರಮಗಳಲ್ಲಿ ಮುಣುಗಿದ್ದ ಸೊದೋಮ್ ಗಮೋರ ಪಟ್ಟಣಗಳನ್ನು ಬೂದಿ ಮಾಡಿ, (೬. ವ.) ದಾಸನಾದ ಲೋಟನನ್ನು ರಕ್ಷಿಸಿದವನಾಗಿಯೂ ಇದ್ದ ದೇವರು, (೭, ೮. ವ.) ನೀತಿವಂತರಿಗೆ ನಿತ್ಯಾನಂದವನ್ನೂ, ದುರ್ಮಾರ್ಗರಿಗೆ ನಿತ್ಯನಾಶನವನ್ನೂ ಬರ ಮಾಡುವನೆಂಬುವದು ಪ್ರತ್ಯಕ್ಷವಾಗಿ ತೋರುತ್ತದೆ. (೯. ವ.)

7. ಪಾಪ ಮಾಡಿದ ದೂತರನ್ನು ದೇವರು ಕನಿಕರಿಸದೆ ಕತ್ತಲೆಯ ಸಂಕೋಲೆಗಳಿಂದ ಕಟ್ಟಿ ನ್ಯಾಯತೀರ್ವಿಕೆಗೆ ಇಟ್ಟಿದ್ದರೆ, ಪಾಪ ಮಾಡಿದ ಮನುಷ್ಯರನ್ನು ತಪ್ಪಿಸುವದು ಹ್ಯಾಗಾದೀತು?

8. ನೋಹನೂ ಅವನ ಕುಟುಂಬದವರೂ ಆದ ಎಂಟು ಮಂದಿಯ ಹೊರ್ತು, ಮಿಕ್ಕಾದವರೆಲ್ಲರೂ ನಾಶವಾದರು. ಅವನು ನೀತಿಯ ಪ್ರಸಂಗಿ ಎಂದು ಇಲ್ಲಿ ಮೊದಲನೇ ಸಾರಿ ಹೇಳಲ್ಪಟ್ಟದೆ. ಅವನು ತನ್ನ ಪರಿಶುದ್ಧ ನಡತೆಯಿಂದಲೂ, ದೇವರ ಅಪ್ಪಣೆಯ ಪ್ರಕಾರ ಹಡಗವನ್ನು ಮಾಡಿದ್ದರಿಂದಲೂ ಮಾತ್ರವಲ್ಲ, ಪಾಪಿಷ್ಠರಿಗೆ ಬರುವ ನೀತಿಯಾದ ದಂಡನೆಯನ್ನು ಸಾರಿದ್ದರಿಂದಲೂ ಮತ್ತೊಬ್ಬರಿಗೆ ಪ್ರಸಂಗಿಸಿರುವನು. (ಇಬ್ರೀ. ೧೧. ೭.)

9. ಹಳೇ ಲೋಕದ ಭಕ್ತಿಹೀನರು ನಾಶವಾದಾಗ ನೋಹನನ್ನು ರಕ್ಷಿಸಿದ ಸತ್ಯಪರನಾದ ದೇವರು, ಅಕ್ರಮ ತುಂಬಿದ ಪಟ್ಟಣಗಳಾದ ಸೊದೋಮ್ ಗಮೋರಗಳು ಬೂದಿಯಾದಾಗ ನೀತಿವಂ

ಆ ನೀತಿವಂತನು ಅವರಲ್ಲಿ ವಾಸ ಮಾಡಿ, ನೋಡುವದರಿಂದಲೂ ಕೇಳುವದರಿಂದಲೂ ದಿನ ದಿನಕ್ಕೆ ಅವರ
೯ ಅನ್ಯಾಯವಾದ ಕ್ರಿಯೆಗಳ ನಿಮಿತ್ತ ತನ್ನ ನೀತಿಯುಳ್ಳ ಪ್ರಾಣವನ್ನು ಕಳವಳಗೊಳಿಸಿದನು. ಕರ್ತನು
೧೦ ಭಕ್ತರನ್ನು ಶೋಧನೆಯೊಳಗಿಂದ ತಪ್ಪಿಸಲೂ, [1]ದಂಡಿಸಲ್ಪಡುವ ಅನೀತಿವಂತರನ್ನು,— ಮುಖ್ಯವಾಗಿ ಮಾಂಸ
ವನ್ನು ಅನುಸರಿಸಿ, ಅಶುದ್ಧತ್ವದ ಇಚ್ಛೆಯಲ್ಲಿ ನಡೆದು, [2]ಒಡೆತನಗಳನ್ನು ತಿರಸ್ಕರಿಸುವವರನ್ನು—ನ್ಯಾಯ
ತೀರ್ವಿಕೆಯ ದಿನಕ್ಕೆ ಇಡಲೂ ಬಲ್ಲನು.
೧೧ ಇವರು ಸಾಹಸವೂ ಸ್ವೇಚ್ಛೆಯೂ ಉಳ್ಳವರಾಗಿ, ನಡುಗದೆ ಮಹಿಮೆಗಳನ್ನು ದೂಷಿಸುತ್ತಾರೆ. ಶಕ್ತಿ
ಯಲ್ಲಿಯೂ ಬಲದಲ್ಲಿಯೂ ಶ್ರೇಷ್ಠರಾದ ದೂತರಾದರೂ ಅವುಗಳಿಗೆ ದೂಷಣೆಯಾದ ತೀರ್ವಿಕೆಯನ್ನು
೧೨ ತರುವದಿಲ್ಲ. ಆದರೆ [3]ಇವರು, ಹಿಡಿಯಲ್ಪಡುವದಕ್ಕೂ ನಾಶವಾಗುವದಕ್ಕೂ ಹುಟ್ಟಿದ, ಸ್ವಭಾವವಾದ,
ಬುದ್ಧಿ ಇಲ್ಲದ ಮೃಗಗಳ ಹಾಗೆ, ತಿಳಿಯದವುಗಳನ್ನು ದೂಷಿಸಿ, ತಮ್ಮ ನಾಶನದಲ್ಲಿಯೇ ನಾಶವಾಗಿ
೧೩ ಅನ್ಯಾಯದ ಸಂಬಳವನ್ನು ಹೊಂದುವರು. ಅವರು ಹಗಲಿನ ಭೋಗವನ್ನು ಸುಖವೆಂದೆಣಿಸಿ, ಕಳಂಕವೂ ಮಲಿ
ನವೂ ಉಳ್ಳವರಾಗಿದ್ದು, ನಿಮ್ಮ ಸಂಗಡ [4]ಊಟ ಮಾಡಿ, ತಮ್ಮ ಮೋಸಗಳಲ್ಲಿ [5]ಇಚ್ಛಾಭೋಗ ಮಾಡುವವ
೧೪ ರಾಗಿಯೂ, [6]ಜಾರತ್ವದಿಂದ ತುಂಬಿದಂಥ, ಪಾಪ ಬಿಡಲಾರದಂಥ ಕಣ್ಣುಳ್ಳವರಾಗಿಯೂ, ಅಸ್ಥಿರವಾದ
ಪ್ರಾಣಗಳನ್ನು ಮೋಸಗೊಳಿಸುವವರಾಗಿಯೂ, ಲೋಭಗಳಲ್ಲಿ ಅಭ್ಯಾಸ ಮಾಡಿದ ಹೃದಯವುಳ್ಳವರಾಗಿ
೧೫ ಯೂ, [7]ಶಾಪದ ಮಕ್ಕಳಾಗಿಯೂ ಇದ್ದು, ಸರಿಯಾದ ಹಾದಿಯನ್ನು ಬಿಟ್ಟು, ತಪ್ಪಿ ಹೋಗಿ, [8]ಬೋಸೊ

ತನಾದ ಲೋಟನನ್ನು ಆ ಆಪತ್ತಿಗೆ ತಪ್ಪಿಸಿ ರಕ್ಷಿಸಿದನು. ಅವನು ಆ ದುರ್ಮಾರ್ಗರ ಸಂಗಡ ವಾಸಿಸ ಸಮ್ಮತಿಸಿದ್ದು ಅಪರಾಧವಾದಾಗ್ಯೂ, ಅವರ ಪಾಪಗಳಿಗೆ ಅವನು ಸಮ್ಮತಿಸದೆ, ಅವರ ದುರ್ನಡತೆಗಳನ್ನು ನೋಡಿ ದಿನಾಲು ಮನಸ್ಸಿನಲ್ಲಿ ವ್ಯಾಕುಲ ಪಟ್ಟನು. ತನ್ನ ಆತ್ಮವನ್ನು ಕಳಂಕವಿಲ್ಲದೆ ಕಾಪಾಡಿದನು.

1. ದುರ್ಮಾರ್ಗರು ಕಡೆಯಲ್ಲಿ ದಂಡನೆ ಹೊಂದುವ ಹಾಗೆ, ಈಗಲೇ ಆಜ್ಞೆ ನಿರ್ಣಯಿಸಲ್ಪಟ್ಟಿದ್ದಾರೆ. ಹೀಗೆ ದುರ್ಮಾರ್ಗರನ್ನು ಆಜ್ಞೆ ನಿರ್ಣಯಿಸಿದ ದೇವರು ಸನ್ಮಾರ್ಗರನ್ನು ಸಕಲ ಶೋಧನೆಗಳಿಂದ ತಪ್ಪಿಸಿ ರಕ್ಷಿಸುತ್ತಾನೆ. ಹಾಗೆಯೇ ತಮ್ಮ ಆದಿ ಸ್ಥಿತಿಯನ್ನು ಕಾಪಾಡಿ ಕೊಂಡ ದೂತರನ್ನೂ, ನೀತಿಪ್ರಸಂಗಿಯಾದ ನೋಹನನ್ನೂ, ನೀತಿವಂತನಾದ ಲೋಟನನ್ನೂ, ಸಕಲ ಶೋಧನೆಗಳಿಂದ ತಪ್ಪಿಸಿ ರಕ್ಷಿಸಿದನೆಂಬುವದು ಮೇಲೆ ಹೇಳಿದ ದೃಷ್ಟಾಂತಗಳಿಂದ ತೋರುತ್ತದೆ. ಇದರಲ್ಲಿ ದೇವರ ಕೃಪೆಯನ್ನು ಮುಂದಾಗಿಯೂ, ಆತನ ನೀತಿಯನ್ನು ಹಿಂದಾಗಿಯೂ ಹೇಳಿ ಇದೆ. ಆತನು ಪಾಪಿಗಳ ಮೇಲೆ ನೀತಿಯನ್ನು ಸಲ್ಲಿಸುವದಕ್ಕಿಂತ, ಭಕ್ತರ ಮೇಲೆ ಕೃಪೆ ತೋರಿಸುವದನ್ನೇ ಅಧಿಕವಾಗಿ ಅಪೇಕ್ಷಿಸುತ್ತಾನೆ.

2. ಕಾಮವಿಕಾರಗಳಲ್ಲಿ ಮುಣುಗಿದವರು, ಒಡೆತನವೂ ಗೌರವವೂ ಉಳ್ಳ ದೊಡ್ಡವರನ್ನು ಲಕ್ಷ್ಯ ಮಾಡದೆ ನಡಿಯುವ ಗರ್ವವುಳ್ಳವರಾಗಿದ್ದಾರೆ. ೧, ೨, ೧೧ನೇ ವಚನಗಳನ್ನೂ ಯೂದನ ಪತ್ರಿಕೆ ೪, ೮ನೇ ವಚನಗಳನ್ನೂ ಯೋಚಿಸುವಾಗ, ಇಲ್ಲಿ ಹೇಳಿರುವ ಒಡೆತನವು, ಕರ್ತನಾದ ಯೇಸುವಿನ ಮೇಲಾದ ಅಧಿಕಾರವನ್ನು ಸೂಚಿಸುತ್ತದೆಂದು ತೋರುತ್ತದೆ. ಬಲಿಷ್ಠ ದೂತರೂ, ಮಿಕಯೇಲನೆಂಬ ಪ್ರಧಾನ ದೂತನು ಸಹ, ಪಾಪಿಷ್ಠರಿಗೂ ಸೈತಾನನಿಗೂ ವಿರೋಧವಾದ ದೂಷಣೆ ಹೇಳಲಿಲ್ಲ. ಆದರೆ ಈ ಕಲಹಗಾರರು ಕರ್ತನಾದ ಯೇಸುವಿನ ಅಧಿಕಾರವನ್ನು ಅಲಕ್ಷ್ಯ ಮಾಡಿ ಆತನ ರಾಜ್ಯಕ್ಕೆ ಸೇರಿದ ಕುಲೀನರನ್ನು ದೂಷಿಸುತ್ತಾರೆ. (ಯೂದ. ೯. ವ.) ಕಾಮವಿಕಾರಗಳಲ್ಲಿ ಮುಣುಗಿರುವ ಅಕ್ರಮಗಾರರು, ದೇವರ ಮಹತ್ವವನ್ನೂ, ದೂತರ ಬಲವನ್ನೂ, ಮನುಷ್ಯರ ಅಧಿಕಾರವನ್ನೂ ಅಲಕ್ಷ್ಯ ಮಾಡಿ ನಡಿಯುವದಕ್ಕೆ ಅಂಜುವದಿಲ್ಲ.

3. ಇವರು ಎಂಬುವದು ೧೦ನೇ ವಚನದಲ್ಲಿ ಹೇಳಿದ ಕಲಹಗಾರರನ್ನು ಕುರಿತದ್ದು. ಬಲದಲ್ಲಿ ಶ್ರೇಷ್ಠರಾದ ಒಳ್ಳೇ ದೂತರು, ಕಲಹ ಮಾಡಿದ ಕೆಟ್ಟ ದೂತರಿಗೆ ವಿರೋಧವಾಗಿ ದೇವರ ಮುಂದೆ ಯಾವ ಅಪರಾಧವನ್ನೂ ಹೊರಿಸದೆ ಇರಲಾಗಿ, ದುರ್ಮಾರ್ಗರೂ ದುಷ್ಟರೂ ಆದ ಕಲಹಗಾರರು ಅಧಿಕಾರದಲ್ಲಿಯೂ ಬಲದಲ್ಲಿಯೂ ಶ್ರೇಷ್ಠರಾಗಿರುವ ಹಿರಿಯರನ್ನು ದೂಷಿಸುತ್ತಾರೆ. ನಾಶವಾಗ ತಕ್ಕ ದುಷ್ಟ ಮೃಗಗಳ ಹಾಗೆ, ಮತ್ತೊಬ್ಬರನ್ನು ಕೆಡಿಸುವ ದುಷ್ಟರು ನಾಶವಾಗಿ ಹೋಗುವರು.

4. ಇದು ಮನೆಗಳಲ್ಲಿ ನಡೆದ ಔತಣಗಳನ್ನಾದರೂ, ಕ್ರೈಸ್ತರಲ್ಲಿ ನಡೆಯುತ್ತಿದ್ದ ಪ್ರೀತಿಭೋಜನಗಳನ್ನಾದರೂ ಸೂಚಿಸುತ್ತದೆ. (೧ ಕೊರಿ. ೧೧. ೨೦, ೨೨.)

5. ಇಚ್ಛಾಭೋಗಕ್ಕೆ ಸುಳ್ಳುಬೋಧನೆಗಳನ್ನು ಆಸ್ಪದವಾಗಿಟ್ಟು ಕೊಳ್ಳುವದು ಮೋಸವೇ ಸರಿ. ಇಂಥವರು ಸಭೆಯಲ್ಲಿ ಕಳಂಕವೂ ಮಲಿನವೂ ಆಗಿದ್ದಾರೆ. ಪರಿಶುದ್ಧ ಸಭೆಯಲ್ಲಿ ಇಂಥಾ ಕಳಂಕವಿರುವದು ಬಹಳ ದುಃಖಕರವಾಗಿದೆ.

6. ಜಾರತ್ವದಿಂದ ತುಂಬಿದ ಕಣ್ಣು ಅಂದರೆ, ಕಾಮಭಾವದ ದೃಷ್ಟಿ. (ಮತ್ತಾ. ೫. ೨೮. ವಚನದ ವ್ಯಾಖ್ಯಾನ ನೋಡ ಬೇಕು.)

7. ನೀಚ ಭೋಗಾಸಕ್ತರೂ ದ್ರವ್ಯಾಶೆಯುಳ್ಳವರೂ ಶಾಪದ ಮಕ್ಕಳಾಗಿದ್ದಾರೆ. (ಎಫೆ. ೨. ೩.) ಜಾರತ್ವ ದ್ರವ್ಯಾಶೆ ಮುಂತಾದ ಪಾಪಗಳ ಮೇಲೆ ತಂಗಿರುವ ದೇವರ ಶಾಪವನ್ನು ಇವರು ಬಾಧ್ಯವಾಗಿ ಹೊಂದುವರು.

8. ಬೋಸೊರನು ಎಂಬುವದೂ ಬೆಯೋರನು ಎಂಬುವದೂ ಒಂದೇ ಹೆಸರು. ಬಿಳಾಮನು ದೇವರ ಸತ್ಯವನ್ನು ಅನುಸರಿಸಿದ ಉತ್ತಮನ ಹಾಗೆ ವೇಷ ತೋರಿಸಿದಾಗ್ಯೂ, ಅವನು ಅನ್ಯಾಯದ ಸಂಬಳವನ್ನು ಅಪೇಕ್ಷಿಸಿ, ತನ್ನ ಅಕ್ರಮದ ನಿಮಿತ್ತ ಗದರಿಸಲ್ಪಟ್ಟನು. ಅವನು ಹತ್ತಿ ಕೊಂಡಿದ್ದ ಕತ್ತೆಯು ಮನುಷ್ಯಭಾಷೆಯಿಂದ ಮಾತಾಡಿದ ಅದ್ಭುತವು ನಡೆದಾಗ, ಅವನ ದಾರಿಗೆ ಅಡ್ಡಗಟ್ಟಿದ ದೂತನು ಅವನನ್ನು ಗದರಿಸಿದನು. ಹೀಗೆ ಅವನು ಗದರಿಸಲ್ಪಟ್ಟಾಗ್ಯೂ, ಅನೀತಿಯ ಸಂಬಳವನ್ನು ಅಪೇಕ್ಷಿಸದೆ ಇರಲಿಲ್ಲ. (ಅಂಕೆ.



ರನ ಮಗನಾದ ಬಿಳಾಮನ ಮಾರ್ಗವನ್ನು ಅನುಸರಿಸಿದ್ದಾರೆ. ಇವನು ಅನ್ಯಾಯದ ಸಂಬಳವನ್ನು ಪ್ರೀತಿ
೧೬ ಮಾಡಿದನು; ಆದರೆ ತನ್ನ ಅಕ್ರಮಕ್ಕೆ ಖಂಡನೆಯನ್ನು ಹೊಂದಿದನು; ಮೂಕ ಪಶುವು ಮನುಷ್ಯಶಬ್ದದಿಂದ
ಮಾತಾಡಿ, ಪ್ರವಾದಿಯ ತಪ್ಪಿದ ಬುದ್ಧಿಗೆ ಅಡ್ಡಿ ಮಾಡಿತು.
೧೭ ಇವರು ನೀರಿಲ್ಲದ ಬುಗ್ಗೆಗಳೂ, ಬಿರುಘಾಳಿ ಬಡಿಯುವ [1]ಮೇಘಗಳೂ ಆಗಿದ್ದಾರೆ. ಅವರಿಗೋಸ್ಕರ
೧೮ ಕಾರ್ಗತ್ತಲು ಎಂದೆಂದಿಗೂ ಇಡಲ್ಪಟ್ಟದೆ. ಯಾಕಂದರೆ ಅವರು, ವ್ಯರ್ಥವಾದ ಗರ್ವದ ಮಾತುಗಳನ್ನಾಡಿ,
ಮೋಸದಲ್ಲಿ ನಡೆಯುವವರಲ್ಲಿಂದ [2]ಚನ್ನಾಗಿ ತಪ್ಪಿಸಿ ಕೊಂಡವರನ್ನು ಮಾಂಸದ ಆಶೆಗಳಿಂದಲೂ ಬಂಡುತನ
೧೯ ಗಳಿಂದಲೂ ಮೋಸಗೊಳಿಸುತ್ತಾರೆ. ಅವರಿಗೆ ಬಿಡುಗಡೆಯನ್ನು ವಾಗ್ದತ್ತ ಮಾಡಿ, ತಾವೇ ಲಯಕ್ಕೆ
[3]ದಾಸರಾಗಿದ್ದಾರೆ. ಯಾಕಂದರೆ ಒಬ್ಬನು ಯಾವದರಿಂದ ಜಯಿಸಲ್ಪಟ್ಟನೋ, ಅದಕ್ಕೆ ದಾಸನಾದನು.
೨೦ ಯಾಕಂದರೆ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ತಿಳುವಿಕೆಯಿಂದ ಲೋಕದ ಕಳಂಕಗಳಿಂದ
ತಪ್ಪಿಸಿ ಕೊಂಡ ಮೇಲೆ, ಇವುಗಳಲ್ಲಿ ಇನ್ನೊಂದು ಸಾರಿ ಶಿಕ್ಕಿ ಕೊಂಡು, ಜಯಿಸಲ್ಪಟ್ಟರೆ, ಅವರಿಗೆ ಮೊದ
೨೧ ಲನೇ ಸ್ಥಿತಿಗಿಂತ [4]ಕಡೇ ಸ್ಥಿತಿ ಕೆಟ್ಟದ್ದಾಯಿತು. ಯಾಕಂದರೆ ನೀತಿಯ ಮಾರ್ಗವನ್ನು ತಿಳಿದು, ಅವರಿಗೆ
ಒಪ್ಪಿಸಲ್ಪಟ್ಟ [5]ಪರಿಶುದ್ಧ ಕಟ್ಟಳೆಯಿಂದ ತಿರುಗಿ ಕೊಳ್ಳುವದಕ್ಕಿಂತ, ತಿಳಿಯದೆ ಇರುವದು ಅವರಿಗೆ ವಾಸಿ.
೨೨ ಆದರೆ, ನಾಯಿ ತಾನು ಕಾರಿದ್ದಕ್ಕೂ, ತೊಳೆದ ಹಂದಿ ಕೆಸರಿನ ಹೊರಳಾಟಕ್ಕೂ ತಿರುಗಿತೆಂಬ (ಸಾಮ.
೨೬. ೧೧.) [6]ಸತ್ಯ ಗಾದೆಯ ಹಾಗೆ ಅವರಿಗೆ ಸಂಭವಿಸಿತು.

ಕರ್ತನು ಪ್ರಸನ್ನನಾಗುವನೆಂಬ ನಿಶ್ಚಯವು; ಅದರ ವಿಷಯವಾದ ಕಟ್ಟಳೆಗಳು.

3\. [7]ಪ್ರಿಯರೇ, ಈ ಎರಡನೇ ಪತ್ರಿಕೆಯನ್ನು ನಿಮಗೆ ಈಗ ಬರೆಯುತ್ತೇನೆ. ಅವುಗಳಲ್ಲಿ (೨) [8]ಪರಿಶುದ್ಧ ಪ್ರವಾದಿ

೨೨—೨೫. ಸಂಧಿಗಳು.) ಕಡೆಯಲ್ಲಿ ಇಸ್ರಯೇಲನ್ನು ಪಾಪದಲ್ಲಿ ಬೀಳಿಸುವ ಹಾಗೆ ಮೋವಾಬಿನ ಅರಸನಾದ ಬಾಲಾಕನಿಗೆ ಆಲೋಚನೆ ಹೇಳಿದನು. (ಅಂಕೆ. ೩೧. ೧೬.)

1. ಮೇಲೆ ಹೇಳಿದ ದುರ್ಮಾರ್ಗರನ್ನು ನೀರಿಲ್ಲದ ಬುಗ್ಗೆಗಳಿಗೂ, ಬಿರುಘಾಳಿಯಿಂದ ಬಡಿಯಲ್ಪಡುವ ಮೇಘಗಳಿಗೂ ಉಪಮಾನ ಮಾಡಿ ಇದೆ. ತನ್ನ ದಾಹ ತೀರಿಸುವದಕ್ಕೆ ನೀರಿಲ್ಲದ ಭಾವಿಯ ಬಳಿಗೆ ಬರುವವನು ಏಮಾರುವ ಪ್ರಕಾರವೂ, ಘಾಳಿಯಿಂದ ಚದರಿಸಲ್ಪಡುವ ಮೇಘದಿಂದ ಮಳೆ ಬರುವದೆಂದು ಕಾದು ಕೊಂಡಿರುವ ರೈತನು ಏಮಾರುವ ಪ್ರಕಾರವೂ, ಸದ್ಗುಣವಿಲ್ಲದ ದುರ್ಮಾರ್ಗರಿಂದ ಯಾರಿಗೂ ಮೇಲು ಆಗಲಾರದು. ಇವರಿಗೆ ಹೊರಗಿನ ಕಾರ್ಗತ್ತಲೆಯೇ ಬಾಧ್ಯವಾಗಿ ಇಡಲ್ಪಟ್ಟದೆ.

2. ಚನ್ನಾಗಿ ತಪ್ಪಿಸಿ ಕೊಂಡವರು ಎಂಬುವದು, ಅಜ್ಞಾನಮಾರ್ಗವನ್ನೂ ಪಾಪವನ್ನೂ ಬಿಟ್ಟು ಹೊಸದಾಗಿ ಗುಣ ಪಟ್ಟವರನ್ನು ಕುರಿತದ್ದು. ಅಂಥವರನ್ನು ಮೇಲೆ ಹೇಳಿದ ದುರ್ಮಾರ್ಗರು ಗರ್ವವಾದ ವ್ಯರ್ಥ ಮಾತುಗಳಿಂದ ಮಾಂಸದಿಚ್ಛೆಯಾದ ಪಾಪದ ಬಲೆಯಲ್ಲಿ ಶಿಕ್ಕಿಸಿ ಕೆಡಿಸುತ್ತಾರೆ.

3. ತಾವೇ ಲಯಕ್ಕೆ ದಾಸರಾಗಿರುವವರು, ಮತ್ತೊಬ್ಬರಿಗೆ ಬಿಡುಗಡೆಯನ್ನು ವಾಗ್ದತ್ತ ಮಾಡುವದು ಹ್ಯಾಗೆ? (ರೋಮಾ. ೬. ೧೬.) ಆದರೆ ಅವರು ವಾಗ್ದತ್ತ ಮಾಡಿದ ಬಿಡುಗಡೆಯು, ಮಾಂಸದಿಚ್ಛೆಗಳನ್ನು ಧಾರಾಳವಾಗಿ ಈಡೇರಿಸ ತಕ್ಕ ಬಿಡುಗಡೆಯೇ ಹೊರ್ತು, ಸರಿಯಾದ ಬಿಡುಗಡೆಯಲ್ಲ. ಮಾಂಸದಿಚ್ಛೆಗಳಿಂದ ಜಯಿಸಲ್ಪಟ್ಟವರು ಅವುಗಳಿಗೆ ದಾಸರಾಗಿದ್ದಾರೆ ಹೊರ್ತು, ಸ್ವಾಧೀನರಲ್ಲ. (ಸಾಮ. ೫. ೨೨. ಯೋಹಾ. ೮. ೩೪. ರೋಮಾ. ೬. ೧೬—೨೩.)

4. (ಮತ್ತಾ. ೧೨. ೪೩—೪೫.) ಕರ್ತನು ಹೇಳಿದ ಈ ವಚನಗಳ ಅಭಿಪ್ರಾಯವನ್ನು ಪೇತ್ರನು ಇಲ್ಲಿ ತೋರಿಸುತ್ತಾನೆ. ರಕ್ಷಕನಾದ ಯೇಸುವನ್ನು ಕುರಿತ ತಿಳುವಳಿಕೆಯಿಂದ ಲೋಕದ ಅಶುದ್ಧವಾದವುಗಳಿಗೆ ತಪ್ಪಿಸಿ ಕೊಂಡವರು, ತಿರಿಗಿ ಆ ಅಶುದ್ಧವಾದವುಗಳಲ್ಲಿ ಶಿಕ್ಕಿ ಕೊಂಡು ಜಯಿಸಲ್ಪಟ್ಟರೆ, ಅವರ ಮೊದಲಿನ ಸ್ಥಿತಿಗಿಂತ ಕಡೇ ಸ್ಥಿತಿ ಅಧಿಕ ಕೇಡುಳ್ಳದ್ದಾಗಿರುವದು. (ಇಬ್ರಿ. ೧೦. ೨೬, ೨೭.)

5. ಪರಿಶುದ್ಧ ಕಟ್ಟಳೆ ಎಂಬುವದು, ಸುವಾರ್ತೆಯಲ್ಲಿ ಅಡಗಿರುವ ದಿವ್ಯ ಪ್ರಮಾಣಗಳನ್ನು ಕುರಿತದ್ದು.

6. ಈ ವಾಕ್ಯವು ಸಾಮ. ೨೬. ೧೧. ವಚನದಲ್ಲಿರುವ ವಾಕ್ಯಕ್ಕೂ, ಜನರಲ್ಲಿ ವಾಡಿಕೆಯಾಗಿದ್ದ ಗಾದೆಗೂ ಅನುಸರಣೆಯಾಗಿದೆ. ಇದರಿಂದ ಹೊರಗಿನ ವಿಷಯಗಳಲ್ಲಿ ಗುಣ ಪಟ್ಟವರ ಹಾಗೆ ಕಾಣಿಸಿದ ಈ ಭಕ್ತಿಹೀನರ ಮನಸ್ಸು ಮಾರ್ಪಡಲಿಲ್ಲವೆಂದು ತಿಳಿಯಬಹುದು. ನಾಯಿ ಕಾರಿದ್ದನ್ನು ತಿನ್ನುವದಕ್ಕೂ, ತೊಳೆಯಲ್ಪಟ್ಟ ಹಂದಿ ಕೆಸರಿನಲ್ಲಿ ಹೊರಳುವದಕ್ಕೂ ಇಷ್ಟ ಪಡುವ ಪ್ರಕಾರ, ಮನಸ್ಸು ಮಾರ್ಪಡದ ದುರ್ಮಾರ್ಗರು ಅಕ್ರಮವೆಂಬ ಕೆಸರಿನಲ್ಲಿ ಹೊರಳುವದಕ್ಕೆ ಇಷ್ಟ ಪಡುವರೇ ಹೊರ್ತು, ಪರಿಶುದ್ಧತ್ವವನ್ನು ಪ್ರೀತಿ ಮಾಡಲಾರರು.

7. ಕರ್ತನ ಪ್ರಸನ್ನತೆಯನ್ನು ನಂಬದೆ, ಅದನ್ನು ಕುಚೋದ್ಯ ಮಾಡಿದ ಭಕ್ತಿಹೀನರಿಗೆ ತೊಲಗಿರ ಬೇಕೆಂದು ಪೇತ್ರನು ಎಚ್ಚರಿಸಿ, (೩. ೧—೪.) ಜಲಪ್ರಳಯದ ದೃಷ್ಟಾಂತದಿಂದ ದೇವರು ಲೋಕವನ್ನು ನಾಶನ ಮಾಡುವದು ನಿಶ್ಚಯವೆಂದು ತೋರಿಸಿ, (೫—೧೦. ವ.) ಎಚ್ಚರಿಕೆಯಾಗಿಯೂ ಜಾಗ್ರತೆಯಾಗಿಯೂ ತಿಳುವಿಕೆಯಲ್ಲಿ ಹೆಚ್ಚುವವರಾಗಿಯೂ ನಡೆದು ಕೊಳ್ಳ ಆಜ್ಞಾಪಿಸಿ, ಸ್ತೋತ್ರದಿಂದ ಪತ್ರಿಕೆ ಮುಗಿಸುತ್ತಾನೆ. (೧೧—೧೮. ವ.)

8. ಪೂರ್ವ ಪ್ರವಾದಿಗಳು ಕ್ರಿಸ್ತನು ಎರಡನೇ ಸಾರಿ ಪ್ರಸನ್ನನಾಗುವದನ್ನು ಕುರಿತು ಪ್ರವಾದಿಸಿದರು. (೧. ೧೯—೨೧.)

ಗಳಿಂದ ಮುಂಚೆ ಹೇಳಲ್ಪಟ್ಟ ಮಾತುಗಳನ್ನೂ, [1]ಕರ್ತನಾದ ರಕ್ಷಕನ ಅಪೊಸ್ತಲರಾದ ನಮ್ಮ ಕಟ್ಟಳೆಯ
ನ್ನೂ ನೀವು ಜ್ಞಾಪಕ ಮಾಡಿ ಕೊಳ್ಳುವ ಹಾಗೆ, ನಿಮ್ಮ ನಿಷ್ಕಪಟವಾದ ಬುದ್ಧಿಗೆ ಜ್ಞಾಪಕ ಕೊಟ್ಟು, ಎಚ್ಚ
೩ ರಿಸುತ್ತೇನೆ. [2]ಮೊದಲು ಇದನ್ನು ತಿಳುಕೊಳ್ಳಿರಿ, ಏನಂದರೆ— ಕಡೇ ದಿವಸಗಳಲ್ಲಿ ಸ್ವೇಚ್ಛೆಗಳ ಪ್ರಕಾರ
೪ ನಡೆಯುವ [3]ಕುಚೋದ್ಯಗಾರರು ಬಂದು— ಅವನ ಬರುವಿಕೆಯ ವಾಗ್ದತ್ತವು ಎಲ್ಲಿ ಅದೆ? ಯಾಕಂದರೆ
ಪಿತೃಗಳು ನಿದ್ರೆ ಹೋದಂದಿನಿಂದ ಎಲ್ಲವುಗಳು, ಸೃಷ್ಟಿಯಾರಭ್ಯ ಇದ್ದ ಹಾಗೆಯೇ, ನೆಲೆಯಾಗಿವೆ, ಎಂದು
ಹೇಳುವರು.

೫ ಯಾಕಂದರೆ ಇವರು ಬೇಕೆಂದು ಇದನ್ನು ತಿಳಿಯದೆ ಇದ್ದಾರೆ; ಏನಂದರೆ—ಪೂರ್ವದಲ್ಲಿ ದೇವರ ವಾಕ್ಯ
೬ ದಿಂದ ಆಕಾಶಗಳೂ ಭೂಮಿಯೂ ನೀರಿನೊಳಗಿಂದಲೂ [4]ನೀರಿನಿಂದಲೂ ಸ್ಥಾಪಿಸಲ್ಪಟ್ಟವು. ಅವುಗಳಿಂದ
೭ ಆಗಿನ ಲೋಕವು ನೀರಿನ ಪ್ರಳಯದಿಂದ ನಾಶನವಾಯಿತು. ಆದರೆ ಈಗಿನ ಆಕಾಶಗಳೂ ಭೂಮಿಯೂ
ಅದೇ ವಾಕ್ಯದಿಂದ ಭದ್ರವಾಗಿ ಇಡಲ್ಪಟ್ಟು, ಭಕ್ತಿಹೀನ ಮನುಷ್ಯರ ನ್ಯಾಯತೀರ್ವಿಕೆ ನಾಶನಗಳ ದಿವಸದ
ಪರ್ಯಂತರ ಬೆಂಕಿಗೋಸ್ಕರ ಇಡಲ್ಪಟ್ಟವೆ.

೮ ಆದರೆ, ಪ್ರಿಯರೇ, ಈ [5]ಒಂದು ಮಾತನ್ನು ನೀವು ತಿಳಿಯದೆ ಇರ ಬಾರದು; ಏನಂದರೆ—ಕರ್ತನಲ್ಲಿ ಒಂದು
ದಿವಸವು ಸಾವಿರ ವರುಷಗಳ ಹಾಗೆಯೂ, ಸಾವಿರ ವರುಷಗಳು ಒಂದು ದಿವಸದ ಹಾಗೆಯೂ, ಅವೆ.
೯ ತಡವೆಂದು ಕೆಲವರು ನೆನಸುವ ಪ್ರಕಾರ, ಕರ್ತನು ವಾಗ್ದತ್ತದಲ್ಲಿ ತಡ ಮಾಡುವದಿಲ್ಲ; ಆದರೆ ಯಾರೂ
ನಾಶನವಾಗ ಬೇಕೆಂದು ಮನಸ್ಸಿಲ್ಲದೆ, ಎಲ್ಲರು ಮಾನಸಾಂತರಕ್ಕೆ ತಿರುಗ ಬೇಕೆಂದು, ಮನಸ್ಸಾಗಿ, ನಮ್ಮ ಕಡೆಗೆ
೧೦ [6]ದೀರ್ಘಶಾಂತಿಯುಳ್ಳವನಾಗಿದ್ದಾನೆ. ಆದರೆ ಕರ್ತನ ದಿನವು [7]ರಾತ್ರಿ ಕಳ್ಳನ ಹಾಗೆ ಬರುವದು; ಆದರಲ್ಲಿ

1. ನಿಮ್ಮ ಅಪೊಸ್ತಲರೆಂಬುವದು, ಅವರಿಗೆ ಸುವಾರ್ತೆ ಪ್ರಸಂಗಿಸಿದ ಪೌಲನು ಬಾರ್ನಬನು ಎಂಬವರನ್ನು ಕುರಿತು ಇರ ಬಹುದು. (೧೬. ವ.) ಹೀಗೆ ಪೂರ್ವ ಕಾಲದ ಪ್ರವಾದಿಗಳೂ, ಹೊಸ ಒಡಂಬಡಿಕೆಯ ಕಾಲದ ಅಪೊಸ್ತಲರೂ ಸತ್ಯಕ್ಕೆ ಸಾಕ್ಷಿ ಕೊಟ್ಟದ್ದರಲ್ಲಿ ಏಕ ಮನಸ್ಸಾಗಿದ್ದರು. ದಿವ್ಯ ಸತ್ಯವಾದ ಪರಿಶುದ್ಧ ಕಟ್ಟಳೆಗಳನ್ನು ಸಾಧು ಹೃದಯದಲ್ಲಿಟ್ಟು ಕೊಂಡು ನಡಿಯುವಂತೆ ಪೇತ್ರನು ಮೊದಲನೇ ಪತ್ರಿಕೆಯಲ್ಲಿ ಕ್ರಿಸ್ತನ ಭಕ್ತರಿಗೆ ಜ್ಞಾಪಕ ಪಡಿಸಿದ ಪ್ರಕಾರ ಈ ಪತ್ರಿಕೆಯಲ್ಲಿಯೂ ಜ್ಞಾಪಕ ಪಡಿಸುತ್ತಾನೆ.

2. ೧. ೨೦. ಯೂದ. ೪—೧೮. ವಚನಗಳ ವ್ಯಾಖ್ಯಾನ ನೋಡ ಬೇಕು.

3. ದಿವ್ಯ ಸತ್ಯಗಳನ್ನು ನಂಬದೆ ಇರುವ ಕುಚೋದ್ಯಗಾರರು ತಮ್ಮ ಸ್ವಂತ ಇಚ್ಛೆಗಳಾದ ಕಾಮಾಪೇಕ್ಷಿತರಾಗಿರುವರು. ಇವರು, ಅವನ ಬರುವಿಕೆಯ ವಾಗ್ದತ್ತವು ಎಲ್ಲಿ ಅದೆ? ವಾಗ್ದತ್ತ ಮಾಡಿ ಬಹಳ ಕಾಲವಾದಾಗ್ಯೂ, ಕರ್ತನು ಪ್ರಸನ್ನನಾಗದೆ ಇರುವದರಿಂದ ವಾಗ್ದತ್ತವು ತಪ್ಪಿ ಹೋಯಿತು; ಪಿತೃಗಳು ನಿದ್ರೆ ಹೋದಂದಿನಿಂದ ಎಲ್ಲವುಗಳು ಇದ್ದ ಹಾಗೆಯೇ ಇವೆ ಎಂದು ಕುಚೋದ್ಯ ಮಾಡಿದರು. ಸ್ವಭಾವಾನುಕ್ರಮವಾಗಿ ಸರ್ವವನ್ನು ಸಂಕಲ್ಪಿಸಿದ ದೇವರು ಯಾವದನ್ನೂ ಮಾರ್ಪಡಿಸುವದಿಲ್ಲವೆಂಬ ಅಭಿಪ್ರಾಯವುಳ್ಳವರಾಗಿದ್ದರು.

4. ಆದಿಯಲ್ಲಿ ನೆಲವೂ ಜಲವೂ ಕಲತಿದ್ದ ಲೋಕವನ್ನು ದೇವರು ಜಲವನ್ನು ಪ್ರತ್ಯೇಕಿಸಲು, ಒಣ ಭೂಮಿ ಕಾಣಲ್ಪಟ್ಟದ್ದರಿಂದ, ನೀರಿನೊಳಗಿಂದ ಸ್ಥಾಪಿಸಲ್ಪಟ್ಟಿತೆಂದೂ, ನೀರುಗಳು ಪ್ರತ್ಯೇಕವಾಗಿ, ಆಕಾಶದ ಕೆಳಗಿನ ನೀರುಗಳು ಭೂಮಿಗೆ ತ್ಯಾವವನ್ನು ಕೊಡುವದರಿಂದಲೂ, ಮೇಲಿನ ನೀರುಗಳು ಭೂಮಿಗೆ ಮಳೆಯನ್ನು ಕೊಡುವದರಿಂದಲೂ, ನೀರಿನಿಂದ ಸ್ಥಾಪಿಸಲ್ಪಟ್ಟಿತೆಂದೂ ಹೇಳಿ ಇದೆ. ಹೀಗಿದ್ದ ಉಭಯ ಜಲಗಳಿಂದ ಹಳೇ ಲೋಕವು ನಾಶವಾಯಿತು. (ಉತ್ಪ. ೭. ೧೧.) ನಾವೆಯಲ್ಲಿದ್ದ ನೋಹನೂ ಅವನ ಕುಟುಂಬದವರೂ ಜೀವಪ್ರಾಣಿಗಳೂ ಹೊರ್ತು, ಮಿಕ್ಕಾದ ಸಮಸ್ತವೂ ನಾಶವಾಯಿತು. (ಉತ್ಪ. ೭. ೨೧—೨೩.) ಆಗ ಹಳೇ ಲೋಕವು ಹೋಗಿ ಹೊಸ ಲೋಕವಾಯಿತು. ಸೃಷ್ಟಿಯಾರಭ್ಯ ಎಲ್ಲಾ ಇದ್ದ ಹಾಗೆಯೇ ಇರುತ್ತವೆ ಎಂದು ಕುಚೋದ್ಯಗಾರರು ಹೇಳಿದ್ದು ಸರಿಯಲ್ಲ. ಸತ್ಯವೇದದಲ್ಲಿ ಸ್ಪಷ್ಟವಾಗಿರುವ ಈ ಸಂಗತಿಗಳನ್ನು ಅವರು ತಿಳಿಯದೆ ಹೋದದ್ದಕ್ಕೆ ಅವರ ಮೂರ್ಖತ್ವವೇ ಕಾರಣ. ದೇವರ ಬಲದಿಂದ ಹಳೇ ಲೋಕವು ಜಲಪ್ರಳಯದಿಂದ ನಾಶವಾದ ಪ್ರಕಾರ, ಈ ಹೊಸ ಲೋಕವು ಅಗ್ನಿಪ್ರಳಯದಿಂದ ನಾಶನವಾಗುವದಕ್ಕೆ ಇರಿಸಲ್ಪಟ್ಟದೆ. ಜಲಪ್ರಳಯದಿಂದ ಸಕಲ ಭಕ್ತಿಹೀನರೂ ನಾಶವಾದ ಪ್ರಕಾರ, ಅಗ್ನಿಪ್ರಳಯದಿಂದ ಸಕಲ ದುರ್ಮಾರ್ಗರೂ ನಾಶವಾಗುವರು.

5. ದೇವರಿಗೆ ತ್ರಿಕಾಲಗಳೂ ಒಂದೇ ಕಾಲದ ಹಾಗಿರುತ್ತವೆ ಎಂಬ ಸತ್ಯವು ಆತನ ಅತಿಶಯ ಕ್ರಿಯೆಗಳನ್ನು ವಿವರಿಸುವದಕ್ಕೆ ಮುಖ್ಯವಾಗಿದೆ. (ಕೀರ್ತ. ೯೦. ೪.)

6. ದೇವರ ನೀತಿಯಾದ ತೀರ್ವಿಕೆ ಸಂಗಡಲೇ ಬಾರದೆ ತಡವಾಗಿರುವದನ್ನು ಕುರಿತು ಭಕ್ತಿಹೀನರು ಕುಚೋದ್ಯ ಮಾಡುವ ವಿಷಯವು, ದೇವರ ದೀರ್ಘಶಾಂತಿಯೇ ಹೊರ್ತು ಬೇರೆ ಹೇತುವಿಲ್ಲ. (೧ ತಿಮೊ. ೨. ೩.)

7. ಪಾಪಿಗಳು ಗುಣ ಪಡ ಬೇಕೆಂದು ಕಾದು ಕೊಂಡಿರುವ ದೇವರ ದೀರ್ಘಶಾಂತಿಗೆ ಒಂದು ಗಡುವುಂಟು. ಆತನ ದಿವಸವು ರಾತ್ರಿಯಲ್ಲಿ ಕಳ್ಳನು ಬರುವ ಪ್ರಕಾರ ಫಕ್ಕನೆ ಬರುವದು. (೧ಥೆಸ್ಸ. ೫. ೨, ೩. ವಚನಗಳ ವ್ಯಾಖ್ಯಾನ ನೋಡ ಬೇಕು.)



ಆಕಾಶಗಳು ಮಹಾ ಘೋಷದಿಂದ ಇಲ್ಲದೆ ಹೋಗುವವು; ಮಹಾ [1]ಭೂತಗಳು ಉರಿದು, ಕರಗಿ ಹೋಗು
ವವು; ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು.

೧೧ ಇವುಗಳೆಲ್ಲಾ [2]ಕರಗಿ ಹೋಗುವದರಿಂದ, ನೀವು, ಆಕಾಶಗಳು ಬೆಂಕಿ ಹತ್ತಿ, ಕರಗಿ ಹೋಗುವಂಥ,
೧೨ ಮಹಾಭೂತಗಳು ಉರಿದು, ಬೆಂದು ಹೋಗುವಂಥ, ದೇವರ ದಿನವು [3]ಬರುವದನ್ನು ಕಾದು ಕೊಂಡು,
೧೩ ನಿರೀಕ್ಷಿಸಿ, [4]ಪರಿಶುದ್ಧವಾದ ನಡತೆಗಳಲ್ಲಿಯೂ ಭಕ್ತಿಗಳಲ್ಲಿಯೂ ಎಂಥವರಾಗಿರ ಬೇಕು? ಆದರೆ ಅವನ
[5]ವಾಗ್ದತ್ತದ ಪ್ರಕಾರ ನೀತಿಯು ವಾಸವಾಗಿರುವ ಹೊಸ ಆಕಾಶಗಳನ್ನೂ, ಹೊಸ ಭೂಮಿಯನ್ನೂ ನಿರೀಕ್ಷಿ
ಸುತ್ತೇವೆ.

೧೪ ಆದದರಿಂದ, ಪ್ರಿಯರೇ, [6]ಇವುಗಳನ್ನು ನಿರೀಕ್ಷಿಸುವವರಾಗಿ ಸಮಾಧಾನದಲ್ಲಿ ಅವನಿಗೆ ನಿರ್ಮಲರಾಗಿಯೂ,
೧೫ ನಿಷ್ಕಳಂಕರಾಗಿಯೂ ಕಾಣಲ್ಪಡುವ ಹಾಗೆ, ಜಾಗ್ರತೆಯಾಗಿರ್ರಿ. ಮತ್ತು ನಮ್ಮ ಕರ್ತನ ದೀರ್ಘಶಾಂತಿ
ಯನ್ನು [7]ರಕ್ಷಣೆ ಎಂದು ಎಣಿಸಿ ಕೊಳ್ಳಿರಿ. ಅದೇ ಪ್ರಕಾರ ನಮ್ಮ ಪ್ರಿಯ ಸಹೋದರನಾದ ಪೌಲನು
೧೬ ಎಲ್ಲಾ ಪತ್ರಿಕೆಗಳಲ್ಲಿಯೂ, ಇವುಗಳ ವಿಷಯವಾಗಿ ಅವುಗಳಲ್ಲಿ ಮಾತಾಡಿ, ಅವನಿಗೆ ಕೊಡಲ್ಪಟ್ಟ ಜ್ಞಾನದ
ಪ್ರಕಾರ ನಿಮಗೆ [8]ಬರೆದಿದ್ದಾನೆ; ಅವುಗಳಲ್ಲಿ ಕೆಲವು ಕಠಿಣ ಅಭಿಪ್ರಾಯಗಳು ಉಂಟು; ಮಿಕ್ಕಾದ

1. ಕರ್ತನ ದಿವಸವು ಕಳ್ಳನಂತೆ ಫಕ್ಕನೆ ಬರುವಾಗ ಆಕಾಶಗಳು ಮಹಾ ಘೋಷದಿಂದ ತೊಲಗಿ ಹೋಗುವವು. ಅಗ್ನಿ, ವಾಯು, ಭೂಮಿ, ಜಲ ಎಂಬ ಭೂತಗಳು ಅಗ್ನಿಯಿಂದ ಉರಿದು ಕರಗಿ ಹೋಗುವವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಭಸ್ಮವಾಗುವವು. ಹಳೇ ಲೋಕವು ಜಲಸ್ನಾನದಿಂದ ಶುದ್ಧಿಯಾದ ಪ್ರಕಾರ, ಈಗಿನ ಲೋಕವು ಅಗ್ನಿಸ್ನಾನದಿಂದ ಶುದ್ಧಿಯಾಗುವದು. ಭೂಮಿಯೊಳಗಿರುವ ಅಗ್ನಿ ಉಕ್ಕುವದರಿಂದಲಾದರೂ ಬೇರೆ ಯಾವ ವಿಧದಿಂದಲಾದರೂ ಈ ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು.

2. ದೇವರು ನಿರ್ಣಯಿಸಿರುವ ಈ ಕಾರ್ಯ ಸಂಭವಿಸುವದು ನಿಶ್ಚಯವಾಗಿರುವದರಿಂದ, ವಿಶ್ವಾಸದ ಕಣ್ಣಿನಿಂದ ಅದನ್ನು ದರ್ಶಿಸಿದ ಪೇತ್ರನು ಲೋಕದ ನಾಶನವು ಈಗಲೇ ನಡಿಯುವ ಕಾರ್ಯದ ಹಾಗೆ, ವರ್ತಮಾನ ಕಾಲದಲ್ಲಿ ಪ್ರಯೋಗಿಸುತ್ತಾನೆ.

3. ಕರ್ತನು ಪ್ರತ್ಯಕ್ಷವಾಗುವ ದೇವರ ದಿನವು ಬರುವದನ್ನು ಕುರಿತು ಕಾಲದ ಗೊತ್ತಿಲ್ಲ. ದೇವರ ಚಿತ್ತದ ಪ್ರಕಾರವೇ ಅದು ಸಂಭವಿಸುವದು. ಆದಾಗ್ಯೂ ಭಕ್ತರು ಮಾಡುವ ಒಂದೊಂದು ಪ್ರಾರ್ಥನೆಯೂ, ಸೇವೆಯೂ, ಆ ಮಹಿಮೆಯಾದ ದಿವಸವು ಶೀಘ್ರವಾಗಿ ಬರುವ ಹಾಗೆ ಮಾಡುವದು. ಇಂಥಾ ತಾತ್ಪರ್ಯದಿಂದ ದೇವರ ದಾಸರು ತಮ್ಮ ಕರ್ತನ ಸೇವೆಯನ್ನು ಜಾಗ್ರತೆಯಿಂದ ಮಾಡ ಬೇಕು. (ಅಪೊ. ಕ್ರಿ. ೩. ೧೯. ವಚನದ ವ್ಯಾಖ್ಯಾನ ನೋಡ ಬೇಕು.) ಆಕಾಶಗಳು ಉರಿದು, ಮಹಾ ಭೂತಗಳು ಬೆಂದು ಹೋಗುವಂಥ, ಆ ಭಯಂಕರವಾದ ದಿವಸವು ನಿಶ್ಚಯವಾಗಿ ಬರುವದೆಂದು ತಿಳಿದಿರುವ ಭಕ್ತರು, ತಮ್ಮ ಕರ್ತನ ಸೇವೆಯಲ್ಲಿ ಪಡುವ ಜಾಗ್ರತೆಗೂ, ಭಕ್ತಿವೈರಾಗ್ಯಕ್ಕೂ ತಕ್ಕ ಹಾಗೆ, ಕರ್ತನು ಶೀಘ್ರವಾಗಿ ಪ್ರತ್ಯಕ್ಷವಾಗುವನೆಂದು ತೀರ್ಮಾನಿಸ ಬಹುದು.

4. ಇದು ದೇವಭಕ್ತಿಯಿಂದ ಉಂಟಾಗುವ ಸದ್ಗುಣ ಸತ್ಕ್ರಿಯೆಗಳನ್ನೆಲ್ಲಾ ಸೂಚಿಸುತ್ತದೆ. ಪರಿಶುದ್ಧ ನಡತೆಗಳೆಂಬುವದು, ಮನುಷ್ಯರ ಮಧ್ಯದಲ್ಲಿ ನಡಿಯ ತಕ್ಕ ವಿಧವನ್ನೂ, ಭಕ್ತಿಗಳೆಂಬುವದು ದೇವರ ಸನ್ನಿಧಿಯಲ್ಲಿ ನಡಿಯ ತಕ್ಕ ವಿಧವನ್ನೂ ಕುರಿತದ್ದು.

5. ವಾಗ್ದತ್ತವೆಂಬುವದು, ಯೆಶಾಯ ಮುಂತಾದ ಪ್ರವಾದನೆಯ ಗ್ರಂಥಗಳಲ್ಲಿ ಅಡಗಿರುವ ಪ್ರವಾದನೆಗಳನ್ನು ಕುರಿತದ್ದು. (ಯೆಶಾ. ೬೫. ೧೭—೨೫; ೬೬. ೨೨.) ಈ ಪ್ರವಾದನೆಗಳಲ್ಲಿ ಸಭೆಗೆ ಉಂಟಾಗುವ ಮಹಿಮೆಯನ್ನು ಕುರಿತು ಮುಂತಿಳಿಸಿ ಇದೆ. ಈ ಪ್ರವಾದನೆಯ ವಾಗ್ದತ್ತದ ಪ್ರಕಾರ ಹೊಸ ಆಕಾಶಗಳೂ ಹೊಸ ಭೂಮಿಯೂ ಉಂಟಾಗುವದು. ಪರಿಶುದ್ಧಾತ್ಮನಿಂದ ಮನುಷ್ಯನ ಆತ್ಮವು ಪುನರ್ಜನ್ಮಿಸುವ ಪ್ರಕಾರ, ಅವು ಹೊಸದಾಗಿ ಮಾಡಲ್ಪಡುವವು. ಹೀಗೆ ಅನೀತಿಯೂ ಅಕ್ರಮವೂ ಇಲ್ಲದೆ ಹೋಗ ತಕ್ಕದ್ದಾಗಿ ನೂತನ ಮಾಡಲ್ಪಟ್ಟ ಲೋಕದಲ್ಲಿ ನೀತಿಯು ಪೂರ್ಣವಾಗಿಯೂ ನೆಲೆಯಾಗಿಯೂ ವಾಸ ಮಾಡುವದು.

6. ಆಕಾಶಗಳೂ ಭೂಮಿಯೂ ನಾಶವಾಗಿ, ಅವು ಹೊಸದಾಗಿ ಮಾಡಲ್ಪಟ್ಟು, ನೀತಿಯ ರಾಜ್ಯವು ಸ್ಥಾಪಿಸಲ್ಪಡುವದೆಂಬ ಈ ಸಂಗತಿಗಳು ಸಂಭವಿಸುವವೆಂದೂ, ಒಂದು ವೇಳೆ ಶೀಘ್ರವಾಗಿ ಸಂಭವಿಸುವವೆಂದೂ, (ಮತ್ತಾ. ೨೪. ೩, ೩೬, ೪೨, ೪೩.) ಸಂದೇಹವಿಲ್ಲದೆ ತಿಳಿದಿರುವ ಭಕ್ತರು ರಾತ್ರಿ ಹಗಲು ಎಚ್ಚರಿಕೆಯೂ ಜಾಗ್ರತೆಯೂ ಉಳ್ಳವರಾಗಿ ನಡಿಯ ಬೇಕು. ಕಳಂಕವಿಲ್ಲದ ದೇವರ ಕುರಿಮರಿಯಾದ ಕ್ರಿಸ್ತನ ರಕ್ತದಿಂದ ಪಾಪದ ಮೈಲಿಗೆಯನ್ನು ತೊಳಕೊಂಡು ನಿರ್ಮಲರಾಗಿ ತೋರ ತಕ್ಕದ್ದು ಜೀವಕಾಲವೆಲ್ಲಾ ಮಾಡ ತಕ್ಕ ಸಾಧನೆಯಾದದರಿಂದ ಜಾಗ್ರತೆಯಾಗಿರ್ರಿ ಎಂದು ಹೇಳಿ ಇದೆ. ಭಕ್ತರ ಜಾಗ್ರತೆಗೆ ತಕ್ಕದ್ದಾಗಿ, ದೇವರ ಸನ್ನಿಧಿಯಲ್ಲಿ ಕಾಣಲ್ಪಡುವಾಗ ಸಮಾಧಾನ ಉಂಟಾಗುವದು.

7. ಕರ್ತನ ದೀರ್ಘಶಾಂತಿಯು, ಕುಚೋದ್ಯಗಾರರು ಹೇಳುವ ಪ್ರಕಾರ, ತಾಮಸವಲ್ಲ, (೯. ವ.) ಅದು ಭಕ್ತಿಹೀನರು ಗುಣ ಪಡುವದಕ್ಕೂ, ಭಕ್ತರು ತಮ್ಮ ರಕ್ಷಣೆಯನ್ನು ಭಯದಿಂದಲೂ ನಡುಗಿನಿಂದಲೂ ಉಂಟು ಮಾಡಿ ಕೊಳ್ಳುವದಕ್ಕೂ ತಕ್ಕ ಕಾಲವಾಗಿದೆ. (ಫಿಲಿ. ೨. ೧೨, ೧೩.)

8. ಇದರ ಹಿಂದೆ ಮುಂದೆ ಇರುವ ವಚನಗಳ ಸಮ್ಮಂಧವನ್ನು ನೋಡುವಾಗ, ಕ್ರಿಸ್ತನ ಪ್ರತ್ಯಕ್ಷತೆಯನ್ನು ಕುರಿತು ಪೌಲನು ೧ ಥೆಸ್ಸ. ೪. ೧೩—೫. ೧೧. ೨ ಥೆಸ್ಸ. ೨. ೧—೧೨. ವಚನಗಳಲ್ಲಿ ಹೇಳಿರುವ ವಿಷಯವನ್ನು ಕುರಿತದ್ದೆಂದು ನೆನಸ ತಕ್ಕದ್ದು. ಪೌಲನು ಈ ವಿಷಯವನ್ನು ಕುರಿತು ಥೆಸ್ಸಲೊನೀಕ್ಯರ

ಬರಹಗಳ ಹಾಗೆ ಇವುಗಳನ್ನು ಸಹ [1]ಕಲಿಯದವರೂ ಅಸ್ಥಿರರೂ ತಮ್ಮ ಸ್ವಂತ ನಾಶನಕ್ಕೆ ಸೊಟ್ಟಗೆ ಮಾಡು
ತ್ತಾರೆ.
೧೭ ಹಾಗಾದರೆ, ಪ್ರಿಯರೇ, ನೀವು ಮುಂತಿಳಿದವರಾಗಿದ್ದು, [2]ನೀತಿಭ್ರಷ್ಟರ ಮೋಸದಲ್ಲಿ ಕೂಡ ಎಳೆಯಲ್ಪಟ್ಟು,
೧೮ ಸ್ವಂತ ಸ್ಥಿರತ್ವದಲ್ಲಿಂದ ಬಿದ್ದು ಹೋಗದ ಹಾಗೆ, ನೋಡಿ ಕೊಳ್ಳಿರಿ. ಇದಲ್ಲದೆ ನಮ್ಮ ಕರ್ತನೂ ರಕ್ಷಕನೂ
ಆಗಿರುವ ಯೇಸು ಕ್ರಿಸ್ತನ ಕೃಪೆಯಲ್ಲಿಯೂ [3]ತಿಳುವಿಕೆಯಲ್ಲಿಯೂ ಬೆಳೆಯಿರಿ. ಅವನಿಗೆ, ಈಗಲೂ [4]ಎಂ
ದೆಂದಿಗೂ, ಮಹಿಮೆ ಆಗಲಿ. ಆಮೆನ್.

ಮೊದಲನೇ ಪತ್ರಿಕೆಯಲ್ಲಿ ಬರೆದದ್ದನ್ನು ಕೆಲವರು ವಿಪರೀತವಾದ ಅರ್ಥ ಮಾಡಿದರೆಂದು, ಎರಡನೇ ಪತ್ರಿಕೆಯಿಂದ ತೋರುತ್ತದೆ. ಆದಾಗ್ಯೂ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಪತ್ರಿಕೆಗಳು ಮಾತ್ರವಲ್ಲ, ತಿಮೊಥೆಯನ, ತೀತನ, ಫಿಲೆಮೋನನ ಪತ್ರಿಕೆಗಳ ಹೊರ್ತು, ಬೇರೆ ಅನೇಕ ಪತ್ರಿಕೆಗಳು ಆ ಕಾಲದಲ್ಲಿ ಪ್ರಸಿದ್ಧವಾಗಿದ್ದವೆಂದು ಈ ೧೬ನೇ ವಚನದಿಂದ ತೋರುತ್ತದೆ. ಪೌಲನನ್ನು ಕುರಿತು ಪೇತ್ರನು ಈ ವಚನದಲ್ಲಿ ಹೇಳಿದ ಸಂಗತಿಯಿಂದ, ಒಂದು ಕಾಲದಲ್ಲಿ ತನ್ನನ್ನು ಖಂಡಿಸಿದಕ್ಕಾಗಿ, ತನ್ನ ಮನಸ್ಸಿನಲ್ಲಿ ಮನಸ್ತಾಪ ಇಟ್ಟು ಕೊಳ್ಳಲಿಲ್ಲವೆಂಬುವದು ಚನ್ನಾಗಿ ತೋರುತ್ತದೆ.

1. ಕಲಿಯದವರು, ಅಂದರೆ, ದೇವರ ವಾಕ್ಯವನ್ನು ಅಭ್ಯಾಸಿಸಲೂ, ಅದರಲ್ಲಿರುವ ಮುಖ್ಯ ಸತ್ಯಗಳನ್ನು ಕಲಿಯಲೂ ಮನಸ್ಸಿಲ್ಲದವರು. ಪರಿಶುದ್ಧಾತ್ಮನಿಂದ ಪ್ರೇರಿತವಾದ ದೇವರ ವಾಕ್ಯವು ನಮ್ಮ ರಕ್ಷಣೆಗೆ ಅವಶ್ಯವಾದ ಸತ್ಯಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಭಕ್ತರು ದೇವರ ವಾಕ್ಯವನ್ನು ತಮ್ಮ ಆತ್ಮರಕ್ಷಣೆಗಾಗಿ ಉಪಯೋಗಿಸಿ ಕೊಳ್ಳುತ್ತಾರೆ. ಭಕ್ತಿಹೀನರಾದ ದುರ್ಮಾರ್ಗರು ದೇವರ ವಾಕ್ಯವನ್ನು ಸೊಟ್ಟಗೆ ಮಾಡುವದರಿಂದ ತಮಗೆ ನಾಶನ ಬರ ಮಾಡಿಕೊಳ್ಳುತ್ತಾರೆ. ಪೌಲನು ಬರೆದ ಪತ್ರಿಕೆಗಳನ್ನು ಪೇತ್ರನು ದೇವರಾತ್ಮನಿಂದ ಪ್ರೇರಿತವಾದವುಗಳೆಂದು ಹೇಳುತ್ತಾನೆ. ದೇವರ ವಾಕ್ಯದಲ್ಲಿ ಕೆಲವು ಆಳವಾದಂಥ, ಕಠಿಣವಾದಂಥ ವಾಕ್ಯಗಳು ತಿಳಿಯದೆ ಇದ್ದಾಗ್ಯೂ, ಅವುಗಳೆಲ್ಲಾ ದೇವರ ಸತ್ಯ ವಾಕ್ಯಗಳೆಂದು ಭಾವಿಸಿ, ಅತ್ಯಂತ ಭಕ್ತಿಯಿಂದ ಅಂಗೀಕರಿಸ ತಕ್ಕದ್ದು. ಬರಹಗಳನ್ನು ಶೋಧಿಸಿರಿ ಎಂದು ನಮ್ಮ ಕರ್ತನೂ, ದೇವರ ವಾಕ್ಯವು ಪ್ರಯೋಜನವಾದದ್ದೆಂದು ಪೌಲನೂ, ದೇವರ ವಾಕ್ಯವೆಂಬ ಮೋಸವಿಲ್ಲದ ಹಾಲನ್ನು ಅಪೇಕ್ಷಿಸಿರಿ ಎಂದು ಪೇತ್ರನೂ, ಹೇಳಿರಲಾಗಿ, ಗುರುಪಟ್ಟ ಹೊಂದದವರು ಯಾರಾದರೂ ದೇವರ ವಾಕ್ಯವನ್ನು ಓದ ಬಾರದೆಂದು ರೋಮುಸಭೆ ಆಜ್ಞಾಪಿಸುವದಕ್ಕೆ ಕಾರಣವೇನು?

2. ನೀತಿಭ್ರಷ್ಟರು ಎಂಬುವದು ಕಳ್ಳಬೋಧಕರನ್ನೂ ಕುಚೋದ್ಯಗಾರರನ್ನೂ ಕುರಿತದ್ದು. (೨, ೩ನೇ ಸಂಧಿಗಳು.)

3. ವೇದವಾಕ್ಯಗಳಲ್ಲಿ ಕೆಲವು ಕಠಿಣವಾಗಿರುವದೂ, ಅಕ್ರಮಕಾರರು ವಿಪರೀತ ಅರ್ಥ ಮಾಡುವದೂ, ಮಿಕ್ಕಾದವರು ಅವುಗಳನ್ನು ಓದಿ ತಿಳುವಳಿಕೆಯಲ್ಲಿ ಬೆಳೆಯುವದಕ್ಕೆ ಅಭ್ಯಂತರವೆಂದು ಎಣಿಸ ಬಾರದು. ದೇವರ ಕೃಪೆಯಲ್ಲಿಯೂ ಕ್ರಿಸ್ತನ ತಿಳುವಳಿಕೆಯಲ್ಲಿಯೂ ಬೆಳೆಯುವದಕ್ಕೆ ದೇವರ ವಾಕ್ಯವನ್ನು ಓದಿ ಧ್ಯಾನಿಸಿ, ಅದರ ಪ್ರಕಾರ ನಡಿಯ ತಕ್ಕದ್ದು.

4. ಈಗಲೂ ಎಂದೆಂದಿಗೂ ಇರುವ ಸದಾಕಾಲವೂ, ಸಕಲ ಮಹಿಮೆಯೂ ಸ್ತೋತ್ರವೂ ಹೊಂದ ತಕ್ಕ ಕ್ರಿಸ್ತನೇ ದೇವರೆಂದು ನಿಶ್ಚಯಿಸ ಬೇಕು.

# THE FIRST EPISTLE GENERAL OF JOHN.

## ಅಪೊಸ್ತಲನಾದ ಯೋಹಾನನ ಹುದುವಾದ ಮೊದಲನೇ ಪತ್ರಿಕೆಯ ಪೀಠಿಕೆ.

ಈ ಗ್ರಂಥವು ಪತ್ರಿಕೆ ಎಂಬ ಹೆಸರುಳ್ಳದ್ದಾಗಿದ್ದರೂ, ಯಥಾರ್ಥವಾಗಿ ಒಂದು ಪತ್ರಿಕೆಯಾಗಿರದೆ, ಒಂದು ಪ್ರಸಂಗ ಅಥವಾ ಪ್ರಬಂಧರೂಪವಾಗಿದೆ. ಬೇರೆ ಪತ್ರಿಕೆಗಳಲ್ಲಿ ಇರುವ ಪ್ರಕಾರ, ಈ ಪತ್ರಿಕೆಯಲ್ಲಿ ಪ್ರಾರಂಭದಲ್ಲಾದರೂ, ಅಂತ್ಯದಲ್ಲಾದರೂ ಸಭೆಗಳಿಗೆ ಆಶೀರ್ವಚನ ವಂದನೋಕ್ತಿಗಳು ಒಂದೂ ಇಲ್ಲ. ಅಪೊಸ್ತಲನಾದ ಯೋಹಾನನು ತನ್ನ ಕರ್ತನ ಊಳಿಗವನ್ನು ಮಾಡುತ್ತಾ ಬಂದ ಎಫೆಸ ಮುಂತಾದ ಪಟ್ಟಣಗಳಲ್ಲಿದ್ದ ಸಭೆಗಳಿಗೆ ಇದು ಹುದುವಾಗಿ ಬರೆದ ಪತ್ರಿಕೆಯಾಗಿದೆ. ಇದನ್ನು ತೆಗೆದು ಕೊಂಡು ಹೋದವರು, ಇದನ್ನು ಬರೆದ ಗ್ರಂಥಕರ್ತನು ಯಾರೆಂದು ಸಭೆಗಳಿಗೆ ತಿಳಿಸುವರೆಂಬ ಯೋಚನೆಯಿಂದ ಯೋಹಾನನು ತನ್ನ ಹೆಸರನ್ನು ಇದರಲ್ಲಿ ಬರೆಯಲಿಲ್ಲವೆಂದು ತೋರುತ್ತದೆ. ಅರ್ಥದಲ್ಲಿಯೂ ವಾಕ್ಯದ ಧೋರಣೆಯಲ್ಲಿಯೂ ಇದು ಯೋಹಾನನ ಸುವಾರ್ತೆಗೆ ಸಮ್ಮಂಧವಾಗಿರುವದರಿಂದ ಇದನ್ನು ಅವನೇ ಬರೆದನೆಂದು ಪೂರ್ವಿಕ ಸಭೆಯವರು ಸಂದೇಹವಿಲ್ಲದೆ ನಿಶ್ಚಯಿಸಿದ ಅಭಿಪ್ರಾಯವು ದೃಢವಾಗಿದೆ. ಇದನ್ನು ಬರೆದವನು ಜಗದ್ರಕ್ಷಕನಾದ ಕ್ರಿಸ್ತನನ್ನೂ ಆತನ ಅದ್ಭುತ ಕ್ರಿಯೆಗಳನ್ನೂ ಕಣ್ಣಾರ ಕಂಡವನಾಗಿದ್ದನೆಂದು ಪ್ರತ್ಯಕ್ಷವಾಗಿ ತೋರುತ್ತದೆ. (೧. ೧—೪; ೪. ೧೪.)

ಯೋಹಾನನು ಎಫೆಸ ಪಟ್ಟಣದಲ್ಲಿ ವಾಸಿಸಿದಾಗ ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಆದಾಗ್ಯೂ ಇದನ್ನು ಕುರಿತು ನಿಶ್ಚಯಿಸುವದಕ್ಕೆ ಹೇತುವೆ ಇಲ್ಲ. ಅವನು ಈ ಪತ್ರಿಕೆಯನ್ನು ಬರೆದ ಕಾಲವನ್ನು ಸಹ ಗೊತ್ತು ಮಾಡಲಿಕ್ಕಾಗದು. ಒಂದು ವೇಳೆ ಮೊದಲನೇ ಶತಾಬ್ದದ ಕಡೆಯಲ್ಲಿ ಬರೆದ ಬಹುದು. ಅಪೊಸ್ತಲನಾದ ಪೌಲನ ಪತ್ರಿಕೆಗಳಲ್ಲಿರುವ ಪ್ರಕಾರ, ಇದರಲ್ಲಿ ಯೆಹೂದ್ಯ ಮತಕ್ಕೆ ಶೇರಿದ ಕಳ್ಳಬೋಧಕರಿಂದ ಉಂಟಾದ ವಾಗ್ವಾದಗಳನ್ನು ಕುರಿತ ಸಂಗತಿಗಳೊಂದೂ ಇಲ್ಲದ್ದರಿಂದ, ಸಭೆಗಳಲ್ಲಿ ಅಂಥಾ ವಾಗ್ವಾದಗಳು ನಿಂತು ಹೋಗಿ, ಮೋಶೆಯ ನ್ಯಾಯಪ್ರಮಾಣದ ಸ್ವಭಾವವೂ, ಕ್ರಿಸ್ತಮಾರ್ಗದ ಸ್ವಭಾವವೂ, ಅವೆರಡಕ್ಕೂ ಇರುವ ಸಮ್ಮಂಧವೂ, ವ್ಯತ್ಯಾಸವೂ ಎಲ್ಲರಿಗೂ ಸ್ಪಷ್ಟವಾಗಿ ತಿಳಿದಿದ್ದ ಕಾಲದಲ್ಲಿ ಈ ಪತ್ರಿಕೆ ಬರೆಯಲ್ಪಟ್ಟಿರ ಬೇಕು. ಕ್ರಿಸ್ತನ ಸಭೆಗಳಲ್ಲಿ ಆ ಕಾಲದಲ್ಲಿ ಯೆಹೂದ್ಯ ಮತದ ಕಳ್ಳಬೋಧಕರಿಂದುಂಟಾದ ವಾಗ್ವಾದಗಳು ಇಲ್ಲದಿದ್ದಾಗ್ಯೂ, ಕ್ರಿಸ್ತಮಾರ್ಗದ ಮೂಲಾಧಾರವಾದ ಉಪದೇಶಗಳಲ್ಲಿ ಕೆಲವು ದುರಭಿಪ್ರಾಯಗಳು ತಲೆದೋರಿದವು. ಕೆಲವರು ಕ್ರಿಸ್ತನ ದೈವತ್ವವನ್ನು ಆಕ್ಷೇಪಿಸಿ, ಆತನು ದೇವರ ಮಗನಲ್ಲವೆಂದು ಸಾಧಿಸ ಮುಂಕೊಂಡರು. (೨. ೨೨; ೪. ೧೫; ೫. ೧.) ಬೇರೆ ಕೆಲವರು ಆತನ ಮನುಷ್ಯತ್ವವನ್ನು ಆಕ್ಷೇಪಿಸಲೂ, ಆತನ ಪುಣ್ಯಮರಣವನ್ನೂ ಪಾಪನಿವಾರಣ ಬಲಿಯನ್ನೂ ಬೊಂಕಲೂ ಯತ್ನಯಿಸಿದರು. ಈ ತಪ್ಪುಗಳನ್ನು ಯೋಹಾನನು ಬಹಳವಾಗಿ ಖಂಡಿಸಿ, (೪. ೩.) ಕರ್ತನಾದ ಯೇಸುವಿನ ಪರಿಶುದ್ಧ ಶರೀರವನ್ನು ತನ್ನ ಕೈಯಿಂದ ಮುಟ್ಟಿ ನೋಡಿದ್ದನ್ನು ದಿಟ್ಟವಾಗಿ ಹೇಳುತ್ತಾನೆ. (೧. ೧.) ಇನ್ನೂ ಕೆಲವರು, ಅದೃಶ್ಯನಾದ ದೇವರನ್ನು ಹೃದಯದಿಂದ ಧ್ಯಾನಿಸಿ ಸ್ತುತಿಸಿದರೆ ಸಾಕು, ಇದನ್ನು ಮಾಡುವವರು ಶರೀರದಿಂದ ಸಕಲ ಅಕ್ರಮಗಳನ್ನು ಧಾರಾಳವಾಗಿ ಮಾಡ ಬಹುದೆಂದು ಸಾಧಿಸಿದ ಹಾಗೆ ಕಾಣುತ್ತದೆ. ಯೋಹಾನನು ಈ ದುಷ್ಟಾಭಿಪ್ರಾಯವನ್ನು ಖಂಡಿಸುವದಕ್ಕೆ, ಸಮಸ್ತ ಪಾಪವು ದೇವರಿಗೆ ವಿರೋಧವಾದ ದ್ರೋಹವೆಂದೂ, (೩. ೪.) ಆತನ ಸಂಗಡ ಅನ್ಯೋನ್ಯವಾಗಿರುವ ಆತನ ದಾಸರು ಆತನ ಹಾಗೆ ಪರಿಶುದ್ಧರಾಗಿ ವಿರಾಜಿಸುವರೆಂದೂ, ಹೀಗೆ ತ್ರಿಕರಣಶುದ್ಧಿಯುಳ್ಳವರಾಗಿ ಧರ್ಮಮಾರ್ಗದಲ್ಲಿ ನಡಿಯುವವರೇ ತ್ರಿಯೇಕ ದೇವರ ನಿಜ ದಾಸರೆಂದೂ, ವಿವರವಾಗಿ ಹೇಳುತ್ತಾನೆ. (೨. ೩—೬; ೩. ೮—೧೦; ೫. ೪, ೧೮.)

ಈ ಪತ್ರಿಕೆಯಲ್ಲಿ ಖಂಡಿಸಿರುವ ಮತಭ್ರಷ್ಟತ್ವಗಳು ಕ್ರಿಸ್ತಸಭೆಯ ಆರಂಭದಲ್ಲಿಯೇ ಪ್ರಬಲವಾದವು. ಈ ಪತ್ರಿಕೆ ಬರಿಯಲ್ಪಟ್ಟ ಕಾಲದಲ್ಲಿ ಮೇಲೆ ಹೇಳಿದ ಮತಭ್ರಷ್ಟರು ತಮ್ಮ ದುರಭಿಪ್ರಾಯಗಳನ್ನು ಕ್ರಮ ಪಡಿಸಿ ವರಿಶೆಯಾಗಿ ಹೇಳಿದರೆಂಬುವ ನಿಶ್ಚಯವಿಲ್ಲ. ಆದಾಗ್ಯೂ ಪೂರ್ವಕಾಲದಲ್ಲಿಯೂ ತತ್ಕಾಲದಲ್ಲಿಯೂ ಇರುವ ಇಂಥಾ ಮತಭ್ರಷ್ಟಾಲೋಚನೆಗಳನ್ನು ನಿರಾಕರಿಸುವದಕ್ಕೆ, ಈ ಪತ್ರಿಕೆಯಲ್ಲಿ ಅಡಗಿರುವ ಉಪದೇಶಗಳು ತಕ್ಕವುಗಳಾಗಿರುವದರಿಂದ ಇದರ ಅಮೂಲ್ಯತ್ವವು ಸರ್ವರಿಗೂ ಚನ್ನಾಗಿ ವಿಶದವಾಗ ತಕ್ಕದ್ದು.

ಆದಾಗ್ಯೂ ಆ ಕಾಲದಲ್ಲಿದ್ದ ಮತಭ್ರಷ್ಟತ್ವಗಳನ್ನು ಖಂಡಿಸುವದೇ ಈ ಪತ್ರಿಕೆಯ ಮುಖ್ಯೋದ್ದಿಶ್ಯವೆಂದು ಯಾರೂ ಎಣಿಸ ಬಾರದು. ಇದರಲ್ಲಿ ಬೇರೆ ಮುಖ್ಯ ವಿಷಯಗಳನ್ನು, ನ್ಯಾಯಶಾಸ್ತ್ರದ ರೀತ್ಯಾ ಪಾಂಗ್ತವಾಗಿ ಅಲ್ಲ, ಇಲ್ಲಿಯೂ ಅಲ್ಲಿಯೂ ಮಿಶ್ರವಾಗಿ ಹೇಳಿ ಇದೆ. ಈ ಪತ್ರಿಕೆಯ ಅರ್ಥವೆಲ್ಲಾ ಎರಡು ಮುಖ್ಯ ವಿಷಯಗಳಲ್ಲಿ ಉಂಟು. ದೇವರು ಬೆಳಕಾಗಿದ್ದಾನೆ, ಆತನ ಮಕ್ಕಳು ಸಹ ಬೆಳಕುಳ್ಳವರಾಗಿ ತೋರ ಬೇಕು; ದೇವರು ಪ್ರೀತಿಯಾಗಿದ್ದಾನೆ, ಆತನ ದಾಸರು ಸಹ ಪ್ರೀತಿಯುಳ್ಳವರಾಗಿ ನಡಿಯ ಬೇಕು, ಎಂಬ ಈ ಎರಡು ವಿಷಯಗಳೇ ಮುಖ್ಯವಾದವುಗಳು. ಯೋಹಾನನು ಇವುಗಳನ್ನು ವಿವರವಾಗಿ ಹೇಳುವಾಗ, ದೇವರ ಸಂಗಡ ಅನ್ಯೋನ್ಯವಾಗಿರುವದರ ಸ್ವಭಾವವನ್ನೂ, ಅದರಿಂದ ಭಕ್ತರಿಗುಂಟಾಗುವ ಮೇಲನ್ನೂ